www.janavaadi.in

# ಜನವಾದಿ

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಸಂಪುಟ : 11 ಸಂಚಿಕೆ : 243 ಪುಟ:4 ರಾಯಚೂರು ಬುಧವಾರ 16–04–2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 11 ISSUE : 243 PAGES : 4 RAICHUR WEDNESDAY 16-04-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಮುಡಾ ಪ್ರಕರಣ ಸಿಎಂಗೆ ತಾತ್ಕಾಲಿಕ ರಿಲೀಫ್

ಬೆಂಗಳೂರು ಏ 15– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕುಟುಂಬದ ಸದಸ್ಯರು ನಿವೇಶನ ಪಡೆದಿರುವ ಪ್ರಕರಣ ಸಂಬಂಧ ತನಿಖೆ ಪೂರ್ಣಗೊಳಿಸಿ ಮೇ.7 ರೊಳಗೆ ಅಂತಿಮ ವರದಿ ಸಲ್ಲಿಸುವಂತೆ ಲೋಕಾಯುಕ್ತ ಅಧಿಕಾರಿಗಳಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಆದೇಶ ನೀಡಿದೆ.

ಆದರೆ ಈ ಹಿಂದೆ ಮೈಸೂರು ಲೋಕಾಯುಕ್ತ ತನಿಖಾ ತಂಡ ಸಲ್ಲಿಸಿದ್ದ ಬಿ ರಿಪೋರ್ಟ್ ವರದಿ ಕುರಿತು ಯಾವುದೇ ಅಂತಿಮ ಆದೇಶವನ್ನು ನೀಡದಿರುವ ನ್ಯಾಯಾಲಯ ಮೇ 7ರೊಳಗೆ ಅಂತಿಮ ವರದಿ ಬಂದ ಬಳಿಕ ಆದೇಶ ನೀಡುವುದಾಗಿ ತೀರ್ಪು ನೀಡಿದೆ.

ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಒಂದಿಷ್ಟು ಹಿನ್ನಡೆ ಎಂದೇ ಹೇಳಲಾಗಿರುವ ಜಾರಿ ನಿರ್ದೇಶನಾಲಯ(ಇ.ಡಿ) ತಕರಾರು ಅರ್ಜಿ ಸಲ್ಲಿಸಬಹುದೆಂದು ಆದೇಶ ನೀಡಿದೆ. ಲೋಕಾಯುಕ್ತ ಅಂತಿಮ ವರದಿ ಬಂದ ನಂತರವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕುಟುಂಬದ ಸದಸ್ಯರು ತನಿಖಾ ವಿಚಾರಣೆಯನ್ನು ಎದುರಿಸಬೇಕೆ ? ಬೇಡವೇ ಎಂಬುದನ್ನು ಆದೇಶದಲ್ಲಿ ತಿಳಿಸುವುದಾಗಿ ಹೇಳಿದೆ.

### ರಾಯಚೂರು ಪೇಟೆ ದರ

| | |
|---|---|
| **ಸಣ್ಣ ಭತ್ತ(ಸೋನಾ)** | |
| ಕನಿಷ್ಟ | 2011 |
| ಗರಿಷ್ಟ | 2339 |
| **ಒಣಕಡಲೆ** | |
| ಕನಿಷ್ಟ | 5450 |
| ಗರಿಷ್ಟ | 5756 |
| **ಕೆಂಪು ತೊಗರಿ** | |
| ಕನಿಷ್ಟ | 6979 |
| ಗರಿಷ್ಟ | 7479 |
| **ಶೇಂಗಾ (ಗುಂಗ್ರು)** | |
| ಕನಿಷ್ಟ | 3805 |
| ಗರಿಷ್ಟ | 6050 |
| **ಸೂರ್ಯಕಾಂತಿ** | |
| ಕನಿಷ್ಟ | 3815 |
| ಗರಿಷ್ಟ | 3815 |
| **ಈರುಳ್ಳಿ** | |
| ಕನಿಷ್ಟ | 2100 |
| ಗರಿಷ್ಟ | 4190 |

### ರಾಜ್ಯ ರಾಜಕೀಯದಲ್ಲಿ ಜಾತಿ ಗಣತಿ ಬಿರುಗಾಳಿ:
## ಬಿಜೆಪಿ ಹೋರಾಟಕ್ಕೆ ಭಾರೀ ಹಿನ್ನಡೆ!




ಬೆಂಗಳೂರು: ಏಪ್ರಿಲ್ 17 ರಂದು ಸಚಿವ ಸಂಪುಟವು ಜಾತಿ ಜನಗಣತಿ ವರದಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಿದೆ ಹೀಗಾಗಿ ಎಲ್ಲರ ಚಿತ್ತ ಏಪ್ರಿಲ್ 17 ನಿರ್ಧಾರದ ಮೇಲೆ ನೆಟ್ಟಿದೆ.


ವರದಿಯಲ್ಲಿ ಸೋರಿಕೆಯಾದ ವಿಷಯಗಳಲ್ಲಿ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ಹೆಚ್ಚಿಸುವ ಬಗ್ಗೆ ಸೂಚಿಸುತ್ತವೆ. ಜಾತಿ ಜನಗಣತಿ ವರದಿ ಅಥವಾ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಶುಕ್ರವಾರ ಸಚಿವ ಸಂಪುಟಕ್ಕೆ ಸಲ್ಲಿಸಲಾಯಿತು.

ಈ ವರದಿಯಿಂದ ಬಿಜೆಪಿಗೆ ಹಿನ್ನಡೆ ಆದಂತೆ ಕಾಣುತ್ತದೆ, ಏಕೆಂದರೆ ಅವರ ಬಳಿ ಕೇವಲ ಕೆಲವು ಒಬಿಸಿ ನಾಯಕರು ಉಳಿದಿದ್ದಾರೆ. ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ ವಿಧಾನಸಭೆಯಲ್ಲಿ ಇಲ್ಲ, ಕೋಟ ಶ್ರೀನಿವಾಸ್ ಪೂಜಾರಿ – ಉಡ–ುಪಿ–ಚಿಕ್ಕಮಗಳೂರು ಸಂಸದರಾಗಿ ಬಡ್ತಿ ಪಡೆದಿದ್ದಾರೆ, ಈಡಿಗರಾಗಿರುವ ಅವರು ಹಿಂದುಳಿದ ಜಾತಿಗಳ ವಿರುದ್ಧದ ಬಿಜೆಪಿಯ ಹೋರಾಟದಲ್ಲಿ ಈ ನಾಯಕರು ಸೇರಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತಿದೆ. ಇನ್ನು ಉಳಿದವರೆಂದರೆ ಕಾರ್ಕಳ ಶಾಸಕ ಸುನೀಲ್ ಕುಮಾರ್ ಮಾತ್ರ.

ಸಿದ್ದರಾಮಯ್ಯನವರಿಂದ ಸಿದ್ದರಾಮಯ್ಯನವರಿಗಾಗಿ ಸಿದ್ದರಾಮಯ್ಯನವರಿಗೋಸ್ಕರ ಸಿದ್ದರಾಮಯ್ಯನವರೇ ಕೈ ಹಿಡಿದು ಬರೆಸಿದ್ದೇ ಈ ಜಾತಿ ಗಣತಿ. ಬೆಲೆ ಏರಿಕೆ, ನಾಯಕತ್ವ ಬದಲಾವಣೆ, ಹನಿ ಟ್ರ್ಯಾಪ್ ನಂಥ ವಿಚಾರಗಳು ತಮ್ಮ ಖುರ್ಚಿಗೆ ಧಕ್ಕೆ ತಂದಿರುವ ಸಂದರ್ಭದಲ್ಲಿ ಸಿದ್ದರಾಮಯ್ಯ ಜಾತಿ ಗಣತಿ ಹೆಲ್ಮೆಟ್ ಧರಿಸಿದ್ದಾರೆ ಎಂದು ಶಾಸಕ ಸುನೀಲ್ ಕುಮಾರ್ ಲೇವಡಿ ಮಾಡಿದ್ದಾರೆ.

☛4

## ಜಾತಿ ಜನಗಣತಿ ಜ್ವಾಲಾಗ್ನಿ: ವರದಿಗೆ 2 ಪ್ರಬಲ ಸಮುದಾಯ ತೀವ್ರ ವಿರೋಧ ; ರಾಜಕೀಯ ಧ್ರುವೀಕರಣ ಸಾಧ್ಯತೆ!




ಬೆಂಗಳೂರು ಏ 15– ಜಾತಿ ಜನಗಣತಿ ಎಂದು ಕರೆಯಲ್ಪಡುವ ಸಾಮಾಜಿಕ–ಆರ್ಥಿಕ ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಸಿದ್ದರಾಮಯ್ಯ ಸಚಿವ ಸಂಪುಟ ಅಂಗೀಕರಿಸಿದೆ. ಇದರಿಂದಾಗಿ ರಾಜ್ಯದ ಎರಡು ಅತ್ಯಂತ ಪ್ರಬಲ ಸಮುದಾಯಗಳು ವರದಿಯನ್ನು ತಿರಸ್ಕರಿಸುವ ಲಕ್ಷಣಗಳು ಕಾಣುತ್ತಿರುವುದರಿಂದ ರಾಜಕೀಯ ಧ್ರುವೀಕರಣಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ಮುಸ್ಲಿಮರು, ಕುರುಬರು ಮತ್ತು ಪರಿಶಿಷ್ಟ ಜಾತಿಗಳ ಒಂದು ಭಾಗದ ಕೆಲವು ಸಮುದಾಯಗಳು ಕಾಂಗ್ರೆಸ್ ಬೆಂಬಲಕ್ಕೆ ನಿಲ್ಲಬಹುದು, ಆದರೆ ಇತರರು ತಮ್ಮ ಜನಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ ಎಂದು ಹೇಳಿ ದಂಗೆ ಏಳಬಹುದು ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ. ಸಮೀಕ್ಷೆಯನ್ನು ವಿರೋಧಿಸುವವರು ಇದು ಅವೈಜ್ಞಾನಿಕ ಎಂದು ಹೇಳುತ್ತಾರೆ ಏಕೆಂದರೆ ಜಾತಿ ಗಣತಿಯಿಂದ ಹೆಚ್ಚಿನ ಜನಸಂಖ್ಯೆಯನ್ನು ಹೊರಗಿಡಲಾಗಿದೆ. ಸಮೀಕ್ಷೆಗಾಗಿ ಯಾವುದೇ ಗಣತಿದಾರರು ನನ್ನ ಮನೆಗೆ ಭೇಟಿ ನೀಡಿಲ್ಲ ಎಂದು ವೀರಶೈವ ಮಹಾಸಭಾದ ಅಧ್ಯಕ್ಷ ಮತ್ತು ಹಿರಿಯ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ.

ಎಣಿಕೆಯ ಮೇಲ್ವಿಚಾರಣೆ ವಹಿಸಿದ್ದ ಕನಕರಾಜು ಆಯೋಗವು, ಸಮೀಕ್ಷೆಯು ಏಪ್ರಿಲ್ 11, 2015 ರಂದು ಪ್ರಾರಂಭವಾಗಿ ಮೇ 30, 2015 ರಂದು ಕೊನೆಗೊಂಡಿತು ಎಂದು ಹೇಳಿಕೊಂಡಿದೆ. ತನ್ನ ಅಧಿಕಾರಾವಧಿಯ 50 ದಿನಗಳಲ್ಲಿ 5.9 ಕೋಟಿ ಜನರನ್ನು ಸಮೀಕ್ಷೆ ಮಾಡಿರುವುದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ಬಿಜೆಪಿ ಶಾಸಕರಾದ ಜಿ.ಬಿ. ಜ್ಯೋತಿಗಣೇಶ್ ಮತ್ತು ಬಿ. ಸುರೇಶ್ ಗೌಡ ಹೇಳಿದ್ದಾರೆ. ವೀರಶೈವ–ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳ ಕೆಲವು ಕಾಂಗ್ರೆಸ್ ಶಾಸಕರು ಸಹ ಇದೇ ರೀತಿಯ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ವೀರಶೈವ–ಲಿಂಗಾಯತರು ಮತ್ತು ಒಕ್ಕಲಿಗರು ವರದಿಯನ್ನು ರದ್ದುಗೊಳಿಸಿ ಹೊಸ ಸಮೀಕ್ಷೆಯನ್ನು ನಡೆಸಬೇಕೆಂದು ಒತ್ತಾಯಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಮೀಕ್ಷೆಯನ್ನು ಅಧಿಕೃತವಾಗಿ ಘೋಷಿಸಿದ ನಂತರ ಪ್ರತಿಭಟನೆಯು ಮತ್ತಷ್ಟು ವೇಗ ಪಡೆಯುತ್ತದೆ ಎಂದು ಮೂಲಗಳು ತಿಳಿಸಿವೆ.

ಉದಾಹರಣೆಗೆ, ಸೋರಿಕೆಯಾದ ವರದಿಯಲ್ಲಿ ತಿಗಳ ಜನಸಂಖ್ಯೆ 5 ಲಕ್ಷ ಎಂದು ಅಂದಾಜಿಸಲಾಗಿದೆ, ಆದರೆ ಸಮುದಾಯದ ನಾಯಕರು ಅವರು 30 ಲಕ್ಷಕ್ಕೂ ಹೆಚ್ಚು ಎಂದು ಹೇಳುತ್ತಾರೆ. ವರದಿಯಲ್ಲಿ ಸಿದ್ದರಾಮಯ್ಯ ಕೈವಾಡವಿರಬಹುದು ಮತ್ತು ಅವರು ಕುರುಬ ಸಮುದಾಯ ಮತ್ತು ಮುಸ್ಲಿಮರ ಬಗ್ಗೆ ಒಲವು ತೋರಿರಬಹುದು ಎಂದು

☛4

### ರಾಯಚೂರು ಜಿಲ್ಲೆ
ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಟ : 39 ಸೆಲ್ಸಿಯಸ್
ಕನಿಷ್ಟ : 28 ಸೆಲ್ಸಿಯಸ್

## ಅಕಾಲಿಕ ಮಳೆಗೆ ನೆಲಕ್ಕಚ್ಚಿದ ಭತ್ತದ ಬೆಳೆ ಎಕರೆಗೆ 50ಸಾವಿರ ಪರಿಹಾರಕ್ಕೆ ಆಗ್ರಹ – ಶರಣಪ್ಪ ಮರಳಿ

ಜನವಾದಿ ವಾರ್ತೆ



ರಾಯಚೂರು ಏ 15– ಜಿಲ್ಲೆಯಲ್ಲಿ ಇತ್ತೀಚೆಗೆ ಆದಂತಹ ಅಕಾಲಿಕ ಮಳೆಯಿಂದಾಗಿ ಭತ್ತದ ಬೆಳೆ ಸಂಪೂರ್ಣ ನಾಶವಾಗಿದ್ದು ಇದುವರೆಗೂ ಕೂಡ ಬೆಳೆಯ ನಷ್ಟದ ಕುರಿತ ಸರ್ವೇ ಕಾರ್ಯಕ್ಕೆ ಅಧಿಕಾರಿಗಳು ಬರುತ್ತಿಲ್ಲ ಕೂಡಲೇ ಜಿಲ್ಲಾಡಳಿತ ಹಾಗೂ ಸರ್ಕಾರ ಬೆಳೆ ಹಾನಿ ಸರ್ವೇ ಕಾರ್ಯ ನಡೆಸಿ ಪರಿಹಾರ ನೀಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಶರಣಪ್ಪ ಮರಳಿಯವರು ಸರ್ಕಾರಕ್ಕೆ ಆಗ್ರಹಿಸಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು ಕಳೆದ ಕೆಲವು ದಿನಗಳ ಹಿಂದೆ ಜಿಲ್ಲೆಯ ಮಸ್ಕಿ, ತಾಲೂಕಿನ ಬಳಗನೂರು ಹೋಬಳಿಯ ಗೌಡನಭಾವಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆಗೆ ಸಾವಿರಾರು ಎಕರೆ ಭತ್ತದ ಬೆಳೆ ನೆಲಕ್ಕಚ್ಚಿ ಸಂಪೂರ್ಣವಾಗಿ ಹಾನಿಗೊಳಗಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರ ಕೂಡಲೇ ಎಕರೆಗೆ 50 ಸಾವಿರ ಪರಿಹಾರ ನೀಡುವಂತೆ ಒತ್ತಾಯಿಸಿದರು.

ಈಗಾಗಲೇ ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದು, ಕೂಡಲೇ ಭತ್ತದ ಖರೀದಿಯಲ್ಲಿ ಇರುವ ಷರತ್ತುಗಳನ್ನು ಹಿಂಪಡೆಯಬೇಕು. ತೆಲಂಗಾಣ ರಾಜ್ಯ ಸರ್ಕಾರ ಘೋಷಿಸಿದಂತೆ ಬೆಂಬಲ ಬೆಲೆ ಜೊತೆಗೆ 500 ರೂ.

☛4

## ನವಲಕಲ್ ಗ್ರಾ.ಪಂ ಅವ್ಯವಹಾರ ಖಂಡಿಸಿ ಏ.16 ಕ್ಕೆ ರಾಯಚೂರಲ್ಲಿ ಪ್ರತಿಭಟನೆ



ಜನವಾದಿ ವಾರ್ತೆ

ರಾಯಚೂರು ಏ 15– ಜಿಲ್ಲೆಯ ಸಿರವಾರ ತಾಲೂಕಿನ ನವಲಕಲ್ ಗ್ರಾಮ ಪಂಚಾಯತಿಯಲ್ಲಿ 2022–23, 2023–24, 2024–25 ನೇ ಸಾಲಿನಲ್ಲಿ 15ನೇ ಹಣಕಾಸು ಯೋಜನೆಯಲ್ಲಿ ಯಾವುದೇ ಕಾಮಗಾರಿಗಳನ್ನು ಮಾಡದೇ ಹಣ ದುರುಪಯೋಗ ಮಾಡಿಕೊಳ್ಳಲಾಗಿದ್ದು , ಗ್ರಾ.ಪಂನಲ್ಲಾದ ಅವ್ಯವಹಾರ ವಿರೋಧಿಸಿ ಎ.16ರಂದು ರಾಯಚೂರಿನ ಟಿಪ್ಪು ಸುಲ್ತಾನ ಉದ್ಯಾನವನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆ ಸಂಸ್ಥೆ ಮಾಹಿತಿ ಹಕ್ಕು ಬಳಕೆದಾರರ ವಿಭಾಗದ ಜಿಲ್ಲಾಧ್ಯಕ್ಷ ಬೆಟ್ಟಪ್ಪ ಎನ್. ಹೊಕ್ರಾಣಿ ತಿಳಿಸಿದರು.

ಅವರಿಂದು ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದವರು 2023 ರ ಆಗಸ್ಟ್ 15 ರಿಂದ 2025 ಏ.6ರವರೆಗೆ ನರೇಗಾ, 15ನೇ ಹಣಕಾಸು, ಶಾಸನ ಬದ್ಧ, ಕರವಸೂಲಿ, ಕೂಸಿನ ಮನೆ, ಆಶ್ರಯ ಮನೆ ಸೇರಿದಂತೆ ಇತರೆ ಯೋಜನೆಗಳಲ್ಲಿ ನವಲಕಲ್ ಗ್ರಾಮ ಪಂಚಾಯತ್

☛4

## ವಿವಾದ ಸೃಷ್ಟಸಿದ ಪ್ರಧಾನಿಯವರ ಪಂಕ್ಚರ್ ಹೇಳಿಕೆ

ನವದೆಹಲಿ ಏ 15– ಇಸ್ಲಾಮಿಕ್ ಕಾನೂನಿನ ಅಡಿಯಲ್ಲಿ ವಕ್ಫ್ ಆಸ್ತಿಗಳನ್ನು ಅಥವಾ ದತ್ತಿ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿ ಮೀಸಲಾಗಿರುವ ಆಸ್ತಿಗಳನ್ನು ಪ್ರಾಮಾಣಿಕವಾಗಿ ಬಳಸಿದ್ದರೆ ಯುವ ಮುಸ್ಲಿಮರು ಜೀವನೋಪಾಯಕ್ಕಾಗಿ ಪಂಕ್ಚರ್ ಹಾಕುವ ಅಗತ್ಯವಿರುವುದಿಲ್ಲ ಎಂಬ ಪ್ರಧಾನಿ ನರೇಂದ್ರ ಮೋದಿಯವರ ಹೇಳಿಕೆಗೆ ವಿರೋಧ ಪಕ್ಷದ ನಾಯಕರು ತೀಕ್ಷವಾಗಿ ಪ್ರತಿಕ್ರಿಯಿಸಿದ್ದಾರೆ.

ಹರಿಯಾಣದ ಹಿಸಾರ್ ನಲ್ಲಿ ನಿನ್ನೆ ವಿಮಾನ ನಿಲ್ದಾಣದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ, ಲಕ್ಷಾಂತರ ಹೆಕ್ಟೇರ್ ಭೂಮಿ ವಕ್ಫ್ ಅಸ್ತಿಯಾಗಿದೆ ಆದರೆ ಅವುಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದರು.

ವಕ್ಸ್ ಆಸ್ತಿಗಳನ್ನು ಪ್ರಾಮಾಣಿಕವಾಗಿ ಬಳಸಿದ್ದರೆ ಮುಸ್ಲಿಂ ಯುವಕರು ಬೈಸಿಕಲ್ ಗಳಿಗೆ ಪಂಕ್ಚರ್ ಹಾಕುವ, ದುರಸ್ತಿ ಮಾಡುವ ಮೂಲಕ ಜೀವನೋಪಾಯ ನಡೆಸುವ ಅಗತ್ಯವಿಲ್ಲ ಎಂದಿದ್ದರು.

## ಪೆಟ್ರೋಲ್ – ಡಿಸೇಲ್ ಬೆಲೆ ಏರಿಕೆ ಕೇಂದ್ರ ಸರ್ಕಾರದ ನೀತಿ ಖಂಡಿಸಿ ಯುವ ಕಾಂಗ್ರೆಸ್‌ನಿಂದ ಪ್ರತಿಭಟನೆ

ಜನವಾದಿ ವಾರ್ತೆ




ಲಿಂಗಸೂಗೂರು ಏ 15– ಕೇಂದ್ರ ಸರ್ಕಾರದ ಇಂಧನ ಮತ್ತು ಎಲ್.ಪಿ.ಜಿ ಬೆಲೆಗಳನ್ನು ಹೆಚ್ಚಿಸಿರುವುದು ಹಾಗೂ ಪೆಟ್ರೋಲ್ ಮತ್ತು ಡಿಸೇಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್ ಗೆ ರೂ. 02 ರಷ್ಟು ಹೆಚ್ಚಿಸಿದ್ದು ಮತ್ತು ಎಲ್.ಪಿ.ಜಿ ಸಿಲಿಂಡರ್ ಬೆಲೆಯನ್ನು ರೂ. 50 ಹೆಚ್ಚಿಸಿರುವುದು ಖಂಡಿಸಿ

ಭಾರತಿಯ ಯುವ ಕಾಂಗ್ರೆಸ್ ಲಿಂಗಸೂಗೂರು ವತಿಯಿಂದ ಪ್ರತಿಭಟನೆ ಮಾಡುವ ಮೂಲಕ ಸಹಾಯಕ ಆಯುಕ್ತರು ಲಿಂಗಸೂಗೂರು ಮುಖಾಂತರ ರಾಷ್ಟಪತಿಗಳಿಗೆ ಮನವಿ ಸಲ್ಲಿಸಿದರು.

ಬೆಲೆ ಏರಿಕೆಗಳು ಈಗಾಗಲೆ ಹಣದುಬ್ಬರ ಹಾಗೂ ನಿರುದ್ಯೋಗದಿಂದ ಸಂಕಷ್ಟದಲ್ಲಿರುವ ಸಾಮಾನ್ಯ ಜನತೆ, ರೈತರು, ದಿನಗೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮೇಲೆ ಭಾರೀ ತೀವ್ರತೆ ಬೀರಿದೆ, ಜನ ವಿರೋದಿ ನಿರ್ಧಾರವನ್ನು ಖಂಡಿಸಿ ಲಿಂಗಸುಗೂರು ವಿಧಾನಸಭಾ ಯುವ ಕಾಂಗ್ರೆಸ್ ಹಾಗೂ ಕರ್ನಾಟಕ ಯುವ ಕಾಂಗ್ರೆಸ್ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ದೊಡ್ಡ ಹನುಮಂತ

☛4

## ರಾಗಲಪರ್ವಿ ಕ್ರಾಸ್ ಬಳಿ ರಸ್ತೆ ತಡೆ ಚಳುವಳಿ

ಜನವಾದಿ ವಾರ್ತೆ



ಸಿಂಧನೂರು ಏ 15 – ಮುಂಗಾರು ಹಂಗಾಮಿನ ಜೋಳ ಖರೀದಿ ಹಾಗೂ ಹಿಂಗಾರು ಜೋಳ ನೊಂದಣಿಗೆ ಸೇ–ರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಂಗಳವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ರಾಗಲಪರ್ವಿ ಕ್ರಾಸ್ ಬಳಿ ರಸ್ತೆ ತಡೆ ಚಳವಳಿ ನಡೆಯಿತು.

ಪ್ರತಿಭಟನೆಯ ನೇತೃತ್ವವಹಿಸಿದ್ದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನಪಾಷಾ ದಿದ್ದಿಗಿ ಮಾತನಾಡಿ, ಡಿಸೆಂಬರ್‌ನಲ್ಲಿ ಜೋಳದ ಬೆಳೆ ಕೊಯ್ಲು ಆಗಿದೆ. ಮುಂಗಾರು ಮತ್ತು ಹಿಂಗಾರು ಹಂಗಾಮಿನ ಜೋಳ ಡಿ.21 ರೊಳಗೆ ನೋಂದಣಿ ಮುಗಿಯ ಬೇಕಿತ್ತು. ಆದರೆ ರಾಜ್ಯ ಸರ್ಕಾರ ಮಾ.28 ರಿಂದ ಹಿಂಗಾರು ಜೋಳ ಖರೀದಿ ನೋಂದಣಿ ಪ್ರಕ್ರಿಯೆ ಆರಂಭಿಸುವ ಆದೇಶ ಹೊರಡಿಸಿತ್ತು. 15 ದಿನಗಳು ಕಳೆದರೂ ಸಹ ನೋಂದಣಿ ಆರಂಭವಾಗಿಲ್ಲ. ಸರ್ಕಾರದಿಂದ ಆದೇಶ ಬಂದಿಲ್ಲವೆಂದು ಅಧಿಕಾರಿಗಳು ಹೇಳುತ್ತಿರುವುದರಿಂದ ಗೊಂದಲ ಸೃಷ್ಟಿಯಾಗಿದೆ ಎಂದು ದೂರಿದರು.

ತಾಲ್ಲೂಕಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಶೇ.70 ರಷ್ಟು ಜೋಳದ ಬೆಳೆ ಬೆಳೆಯಲಾಗಿದ್ದು, ಕಟಾವ್ ಮಾಡಿ ಮೂರ್‍ನಾಲ್ಕು ತಿಂಗಳಾಗಿವೆ. ಈಗಾಗಲೇ ಹುಳ ಬಿದ್ದು ನುಸಿ ಬರುತ್ತಿದೆ. ಆದರೆ ಸರ್ಕಾರ ಮುಂಗಾರು ಮತ್ತು ಹಿಂಗಾರು ಎಂದು ವಿಂಗಡಿಸಿ ರೈತರಿಗೆ ತೊಂದರೆ ಮಾಡಿದೆ. ತಕ್ಷಣವೇ ಹಿಂಗಾರು ನೋಂದಣಿ ಪ್ರಕ್ರಿಯೆ ಆರಂಭಿಸಿ, ತಕ್ಷಣವೇ ಖರೀದಿ ಮಾಡಬೇಕು. ಖಾಸಗಿ ಏಜೆನ್ಸಿಗಳ ಗ್ರೇಡರ್ ತೆಗೆಯಬೇಕು. ಲಾರಿ ಮತ್ತು ಹಮಾಲರ ಕೊರತೆ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ತಹಶೀಲ್ದಾರ ಅರುಣ ಹೆಚ್. ದೇಸಾಯಿ ಪ್ರತಿಭಟನಾ ಸ್ಥಳಕ್ಕೆ ತೆರಳಿ ರೈತರಿಮದ ಮನವಿ ಸ್ವೀಕರಿಸಿದರು. ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಹಂಚಿನಾಳ, ತಾಲ್ಲೂಕು ಘಟಕದ ಗೌರವಾಧ್ಯಕ್ಷ ಅಣ್ಣಪ್ಪ ಜಾಲಿ ಹಾಳ, ಮಾನ್ವಿ ತಾಲ್ಲೂಕು ಘಟಕದ ಕಾರ್ಯಾಧ್ಯಕ್ಷ ದುರುಗಪ್ಪ ತಡಕಲ್ ಅನೇಕ ರೈತರು ಭಾಗವಹಿಸಿದ್ದರು.

## ನೀಟ್ ಪರೀಕ್ಷೆ ಪೂರ್ವಭಾವಿ ಸಭೆ

ಜನವಾದಿ ವಾರ್ತೆ



ರಾಯಚೂರು ಏ 15 – ವೈದ್ಯಕೀಯ ಪದವಿ ಕೋರ್ಸುಗಳ ಪ್ರವೇಶಕ್ಕೆ ಏಪ್ರಿಲ್ 16 ಹಾಗೂ 17ರಂದು ನಡೆಯಲಿರುವ ನೀಟ್ ಪರೀಕ್ಷೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಸಮಿತಿ ಸಭೆಯನ್ನು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಇತ್ತೀಚೆಗೆ ಜರುಗಿತು.

ಈ ವೇಳೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಮಾತನಾಡಿ, ಜಿಲ್ಲೆಯಲ್ಲಿ ಏಪ್ರಿಲ್ 16 ಹಾಗೂ 17ರಂದು ನೀಟ್ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರಗಳ ಕೊಠಡಿಯಲ್ಲಿ ಸಿ.ಸಿ ಕ್ಯಾಮೆರಾದ ವ್ಯವಸ್ಥೆ ಹಾಗೂ ಪೀಠೋಪಕರಣದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಮಾರ್ಗಸೂಚಿಗಳನ್ವಯ ಕಟ್ಟುನಿಟ್ಟಿನ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ನೀಟ್ ಪರೀಕ್ಷೆಗೆ ರಾಯಚೂರು ಜಿಲ್ಲೆಯಲ್ಲಿ 21 ಪರೀಕ್ಷಾ ಕೇಂದ್ರಗಳಿದ್ದು, 6,532 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಲಾಗಿದ್ದು, ನೀಟ್ ಪರೀಕ್ಷೆ ಸುಗಮವಾಗಿ ನಡೆಯಲು ಎಲ್ಲ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸುವ ಅಭ್ಯರ್ಥಿಗಳ ತಪಾಸಣೆ ಸೇರಿದಂತೆ ವಿವಿಧ ರೀತಿಯ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಹೆಚ್ಚುವರಿ ವರಿಷ್ಠಾಧಿಕಾ–ರಿಗಳಾದ ಜಿ.ಹರೀಶ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ರಂಗಪ್ಪ, ಇಲಾಖೆಯ ಹಿರಿಯ ಅಧಿಕಾರಿ ಸೋಮಶೇಖರಪ್ಪ ಹೊಕ್ರಾಣಿ, ಇಲಾಖೆಯ ಸಿಬ್ಬಂದಿ ಎಂ.ಡಿ.ಇಶಾಕ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

## ಹಿಂಗಾರು ಜೋಳ ನೋಂದಣಿಗೆ ಒತ್ತಾಯಿಸಿ ಪೋತ್ನಾಳ ಸಿಂಧನೂರು ರಸ್ತೆ ತಡೆ ನಡೆಸಿ ರೈತರಿಂದ ಪ್ರತಿಭಟನೆ

ಜನವಾದಿ ವಾರ್ತೆ



ಮಾನ್ವಿ ಏ 15– ತಾಲೂಕಿನ ಪೋತ್ನಾಳ ಸಿಂಧನೂರು ರಸ್ತೆಯಲ್ಲಿ ತಾಲೂಕಿನ ವಿವಿಧ ರೈತ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಮಾನ್ವಿ ಹಾಗೂ ಸಿಂಧನೂರು ತಾಲೂಕಿನ ವಿವಿಧ ಗ್ರಾಮಗಳ ರೈತರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಸಿಂಧನೂರು ತಹಶೀಲ್ದಾರ ಅರುಣಕುಮಾರ ದೇಸಾಯಿ ಹಾಗೂ ಮಾನ್ವಿ ಉಪತಹಸೀಲ್ದಾರ ವಿರುಪಣ್ಣ ರವರ ಮೂಲಕ ಮನವಿ ಸಲ್ಲಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನ್ ಪಾಷ ದಿದ್ದಿಗಿ ಮಾತನಾಡಿ ಮುಂಗಾರು ಹಂಗಾಮಿನಲ್ಲಿ ಜೋಳ ಬೆಳೆದ ರೈತರು ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತಾವು ಬೆಳೆದ ಜೋಳವನ್ನು ಮಾರಾಟ ಮಾಡುವುದಕ್ಕೆ ನೊಂದಾಯಿಸಿದ ನಂತರ ಖರೀದಿ ಕೇಂದ್ರಗಳ ಮೂಲಕ ಸರ್ಕಾರವು ರೈತರಿಂದ ಜೋಳವನ್ನು ಖರೀದಿಸುವುದಕ್ಕೆ ಸಾಕಷ್ಟು ವಿಳಂಬಮಾಡಿರುವುದಲ್ಲದೆ ಇನ್ನೂ ಕೂಡ ರೈತರಿಂದ ಪೂರ್ಣ ಪ್ರಮಾಣದಲ್ಲಿ ಜೋಳವನ್ನು ಖರೀದಿ ಮಾಡದೆ ಇರುವುದರಿಂದ ರೈತರಿಗೆ ಸಾಕಷ್ಟು ನಷ್ಟವಾಗುತ್ತಿದೆ. ಹಿಂಗಾರು ಹಂಗಾಮಿನ ಜೋಳದ ಬೆಳೆ ಕೂಡ ಕಟಾವು ಮಾಡಿ ನಾಲ್ಕು ತಿಂಗಳು ಕಳೆದಿದ್ದರು ಕೂಡ ಇನ್ನೂ ಹಿಂಗಾರು ಹಂಗಾಮಿನ ಜೋಳವನ್ನು ಖರೀದಿ ಮಾಡುವುದಕ್ಕೆ ರೈತರಿಂದ ನೊಂದಾಣಿ ಮಾಡಿಕೊಳ್ಳುವುದಕ್ಕೆ ಮುಂದಾಗದೆ ಇರುವುದರಿಂದ ರೈತರಿಗೆ ತೀವ್ರವಾದ ಸಂಕಷ್ಟ ಎದುರಾಗಿದೆ. ಅದ್ದರಿಂದ ಕೂಡಲೇ ರೈತರ

ಜೋಳ ಖರೀದಿಗೆ ನೊಂದಾಣಿಯನ್ನು ಪ್ರಾರಂಭಿಸುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು. ರೈತರು ತಾವು ಬೆಳೆದ ಜೋಳವನ್ನು ಮಾರಾಟಮಾಡುವುದಕ್ಕೆ ಖರೀದಿ ಕೇಂದ್ರಗಳಿಗೆ ತಂದ ಸಮಯದಲ್ಲಿ ಗೋಡನ್ ನಲ್ಲಿರುವ ಗ್ರೇಡರ್‌ಗಳು ವಿನಾಕಾರಣ ರೈತರಿಗೆ ತೊಂದರೆ ನೀಡುತ್ತಿರುವುದನ್ನು ತಪ್ಪಿಸಬೇಕು. ಜೋಳಖರೀದಿ ಕೇಂದ್ರಗಳಲ್ಲಿ

ತೂಕದ ಯಂತ್ರಗಳನ್ನು ಹೆಚ್ಚಿಸಬೇಕು. ರಾಜ್ಯ ಸರ್ಕಾರವು,ರೈತರಿಗೆ ಮಾರಕವಾದ ಕೃಷಿ ಕಾಯ್ದೆ,ಜಾನುವಾರು ಕಾಯ್ದೆ,ಎ.ಪಿ.ಎಂ.ಸಿ. ಕಾಯ್ದೆಗಳನ್ನು ಕೈಬಿಡಬೇಕು ,ರೈತರ ಪಂಪ್ ಸೇಟ್ ಗಳಿಗೆ ಡಿಜಿಟಲ್ ಸ್ಮಾರ್ಟ ಮೀಟರ್ ಅಳವಡಿಸುವುದನ್ನು ಕೈಬಿಡಬೇಕು,ವಿದ್ಯುತ್ ಖಾಸಗಿಕರಣ ಕೈಬೀಡಬೇಕು,ಬಗರ್ ಹುಕುಂ ಸಾಗುವಳಿದಾರರಿಗೆ ಶಿಘ್ರವೇ ಸಾಗುವಳಿ ಚೀಟಿಯನ್ನು

☛4

# ಅಂಬೇಡ್ಕರ್ ಅವರು ವಾಸ್ತವಿಕ ಮತ್ತು ವೈಜ್ಞಾನಿಕ ನೆಲೆಯ ಚಿಂತನಾವಾದಿ – ಡಾ. ವೆಂಕಟಗಿರಿ ದಳವಾಯಿ

ಜನವಾದಿ ವಾರ್ತೆ




ರಾಯಚೂರು ಏ 15 – ಅಂಬೇಡ್ಕರ್ ಅವರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿದ್ದ ಅವರು ದೇಶವನ್ನು ಹೇಗೆ ಕಟ್ಟಬೇಕು ಮತ್ತು ಹೇಗೆ ಮುನ್ನಡೆಸಬೇಕು ಎಂಬ ಬಗ್ಗೆ ವಾಸ್ತವದ ನೆಲೆಯಲ್ಲಿ ಚಿಂತನೆಗಳನ್ನು ಹೊಂದಿದ್ದರು. ಅನ್ವೇಶಣೆ, ಸಂಶೋಧನೆ ಮತ್ತು ಚಿಂತನೆಯ ಮೂಲಕ ಪ್ರಗತಿಯನ್ನು ಸಾಧಿಸಬಹುದು ಎಂಬುದನ್ನು ತಮ್ಮ ಇಡೀ ಜೀವನದಿದ್ದಕ್ಕೂ ಪಾಲಿಸಿ, ಪ್ರತಿಪಾದಿಸಿದ ಅವರು, ಎಲ್ಲೂ ಹಿಂಸೆಯ ಮಾರ್ಗವನ್ನು ತುಳಿಯಲ್ಲಿಲ್ಲ ಮತ್ತು ಅದನ್ನು ಬೆಂಬಲಿಸಲಿಲ್ಲ. ಇದೇ ಕಾರಣಕ್ಕೆ ಅವರು ಒಬ್ಬ ಮಹಾ ಮನವತಾವಾದಿಯಾಗಿ ಹಾಗೂ ಮಹಾನ್ ದೇಶಭಕ್ತರಾಗಿ ನಮ್ಮ ಮುಂದೆ ನಿಲ್ಲುತ್ತಾರೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ವೆಂಕಟಗಿರಿ ದಳವಾಯಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಕೃಷ್ಣತುಂಗಾ ಸಭಾಂಗಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದ ಅವರು, ದೇಶದಲ್ಲಿ ದಮನಿತರ ಏಳಿಗೆಗಾಗಿ ಚಿಂತಿಸಿದ ಮೊದಲ ವ್ಯಕ್ತಿ ಎಂದು ಅಂಬೇಡ್ಕರ್ ಅವರನ್ನು ಕರೆದರೆ ತಪ್ಪಾಗಲಾರದು. ವಿದ್ಯಾವಂತರಾಗಿ, ಸಂಘಟಿತರಾಗಿ ಎಂದು ಜನರನ್ನು ಉತ್ತೇಜಿಸಿದ ಅವರು ಎಂದಿಗೂ ಹಿಂಸೆಯ ಮಾರ್ಗವನ್ನು ಪ್ರತಿಪಾದಿಸಲಿಲ್ಲ. ಸಮಾನತೆ ಜೊತೆಗೆ ಭ್ರಾತೃತ್ವದ ಭಾವನೆಯ ಮೇಲೆ ಅಪಾರ ಒಲವು ಹಾಗೂ ನಂಬಿಕೆಯನ್ನು ಹೊಂದಿದ್ದ ಅವರು ತಮ್ಮ ಜೀವನದುದ್ದಕ್ಕೂ ಅದಕ್ಕಾಗಿ ಹೋರಾಟ ಮಾಡಿದರು. ಸದಾ ಒಳಿತಿನ ಕಡೆ ಮುಖ ಮಾಡಿದ್ದ ಅವರು ಯಾರನ್ನೂ ದ್ವೇಶಿಸಲಿಲ್ಲ. ತಮ್ಮ ಅಪಾರ ಜ್ಞಾನ ಹಾಗೂ ಅನುಭವ–ಚಿಂತನೆಯ ಕಾರಣವಾಗಿ ತಾವೇ ಒಂದು ಬದಲಾವಣೆಯ ಮುಖವಾಗಿ ಹೊರಹೊಮ್ಮಿದರು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಪಕುಲಪತಿಗಳಾದ (ಪ್ರಭಾರ) ಡಾ. ಸುಯಮೀಂದ್ರ ಕುಲಕರ್ಣಿಯವರು ಮಾತನಾಡಿ, ಸಸ್ಯ, ಪ್ರಾಣಿ, ಪಕ್ಷಿ ಹಾಗೂ ಕೀಟಗಳೆಂದು ಪ್ರಕೃತಿಯಲ್ಲಿ ಭಿನ್ನತೆ ಇದೆಯೇ ಹೊರತು ಮನುಷ್ಯ–ಮನುಷ್ಯರ ನಡುವೆ ಅಲ್ಲ. ಜಾತಿ ವ್ಯವಸ್ಥೆ ಪ್ರಗತಿಗೆ ಎಂದಿಗೂ ಮಾರಕ. ಸಂವಿಧಾನವನ್ನು ಪೂಜಿಸುವುದರಿಂದ ಬದಲಾವಣೆ ಸಾಧ್ಯವಿಲ್ಲ, ಅದರಲ್ಲಿ ಇರುವ ಆಶಯಗಳು ಅಳವಡಿಸಿಕೊಂಡು ಪಾಲಿಸಿದಾಗ ಮಾತ್ರ ಬದಲಾವಣೆ ತರಲು ಸಾಧ್ಯ ಎಂದು ಹೇಳಿದರು.

ಉಪಕುಲಸಚಿವರಾದ (ಆಡಳಿತ) ಡಾ. ಕೆ.ವೆಂಕಟೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಾವಿಂದು ಕಾಣುತ್ತಿರುವ ಹೊಸ ತಲೆಮಾರು ಅಕ್ಷರ ಲೋಕಕ್ಕೆ ತೆರೆದುಕೊಳ್ಳಲು ಕಾರಣವೇ ಸಂವಿಧಾನ. ಜೀವನದ ಪ್ರತಿ ಹಂತದಲ್ಲೂ ಸಮಾನತೆಯನ್ನು ನೀಡುವ ಮೂಲ ಆಶಯವನ್ನು ಹೊಂದಿರುವ ನಮ್ಮ ಸಂವಿಧಾನ ಜೀವ ಪರ. ಭಾಷೆ, ಪ್ರಾದೇಶಿಕತೆ, ಸಂಸ್ಕೃತಿ ಸೇರಿದಂತೆ ಅಹು ವಿಚಾರಗಳಿಂದ ವೈವಿಧ್ಯಮಯವಾಗಿರುವ ಭಾರತಕ್ಕೆ ಸಂವಿಧಾನವನ್ನು ರೂಪಿಸಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಸಚಿವರಾದ (ಆಡಳಿತ) ಡಾ. ಶಂಕರ್ ವಣಿಕ್ಯಾಳ್ (ಕೆಎಎಸ್, ಆಯ್ಕೆ ಶ್ರೇಣಿ), ಮೌಲ್ಯಮಾಪನ ಕುಲಸಚಿವರಾದ ಪ್ರೊ. ಜ್ಯೋತಿ ದಮ್ಮ ಪ್ರಕಾಶ್ ಅವರು ವೇದಿಕೆ ಮೇಲೆ ಉಪಸ್ಥಿತ–ರಿದ್ದರು. ಸಸ್ಯಶಾಸ್ತ್ರ ವಿಭಾಗದ ಉಪನ್ಯಾಸಕಿಯಾದ ಪನ್ನಗವೇಣಿ ಪ್ರಾರ್ಥನಾ ಗೀತೆ ಹಾಡಿದರು, ಮಹಿಳಾ ಅಧ್ಯಯನ ವಿಭಾಗದ ಡಾ. ಭೀಮೇಶ್ ಮಾಚನೂರು ಸ್ವಾಗತಿಸಿದರು, ಸಸ್ಯಶಾಸ್ತ್ರ ವಿಭಾಗದ ಸುಶ್ಮಿತಾ ವಂದಿಸಿದರು, ಅರ್ಥಶಾಸ್ತ್ರ ವಿಭಾಗದ ದುರುಗಪ್ಪ ಗಣೇಕಲ್ ಅತಿಥಿ ಪರಿಚಯ ಮಾಡಿಕೊಟ್ಟರು ಮತ್ತು ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದ ಶ್ವೇತಾ.ಜಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಬುದ್ಧವಂದನೆ ಮಾಡಲಾಯಿತು ಮತ್ತು ನೆರೆದಿದ್ದ ಗಣ್ಯರು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸದರು. ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾ ಡಾ. ಜಿ. ಎಸ್.ಬಿರಾದಾರ್ ಅವರು ಸಂವಿಧಾನ ಪ್ರತಿಜ್ಞಾವಿಧಿ ಬೋಧಿಸಿದರು. ಉಪಕುಲಸಚಿವರಾದ (ಶೈಕ್ಷಣಿಕ) ಡಾ. ಲತಾ.ಎಂ.ಎಸ್, ಡೀನರುಗಳಾದ ಪ್ರೊ. ಪಾರ್ವತಿ.ಸಿ.ಎಸ್, ಪ್ರೊ. ಭಾಸ್ಕರ್.ಪಿ, ಅಭಿಯಂತರರಾದ ಪಂಪಾಪ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಶುಲ್ಕ ಮರುಪಾವತಿ ಸೌಲಭ್ಯ; ಮೇ.31ರವರೆಗೆ ಅರ್ಜಿ ಅವಧಿ ವಿಸ್ತರಣೆ

ಜನವಾದಿ ವಾರ್ತೆ

ರಾಯಚೂರು 15 – ಇಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ಮೇ.31ರವರೆಗೆ ವಿಸ್ತರಣೆ ಮಾಡಲಾಗಿದೆ.

ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ ಅರ್ಜಿ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಲು ಮನವಿ ಮಾಡಿಕೊಂಡಿರುವ ಹಾಗೂ ಮಾನ್ಯ ಹೈಕೋರ್ಟ್ ಮಧ್ಯಂತರ ಆದೇಶದಂತೆ ಎಲ್ಲಾ ಕೋರ್ಸುಗಳಿಗೆ ಶುಲ್ಕ ಮರು ಪಾವತಿಗೆ ಅವಧಿಯನ್ನು ವಿಸ್ತ–ರಿಸಲಾಗಿದೆ. ಆಸಕ್ತರು ಅರ್ಜಿಯನ್ನು ಇಲಾಖೆಯ ವೆಬ್ ಸೈಟ್ ವಿಳಾಸ: http://ssp.postmatric.karnataka.gov.in/ ನಲ್ಲಿ ಸಲ್ಲಿಬಹುದಾಗಿದೆ. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಬೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ: http://bcwd.karnataka.gov.in ನೋಡಬಹುದಾಗಿದೆ. ಇಲಾಖೆ ಸಹಾಯವಾಣಿ ದೂರವಾಣಿ ಸಂಖ್ಯೆ:8050770005 ಇಮೇಲ್: bcwdhelpline@gmail.com ಅಥವಾ ಲ್ರಾಜಗಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇ–ಮೇಲ್: postmatrichelp@karnataka.gov.in ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂತೋಷ್ ಹುಂಪ್ಲಿಗೆ ಪಿಎಚ್.ಡಿ ಪದವಿ ಪ್ರಧಾನ

ಜನವಾದಿ ವಾರ್ತೆ



ಕಲಬುರಗಿ ಏ 15– ಕಲಬುರಗಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಸಂತೋಷ್ ಹುಂಪ್ಲಿ ಅವರು ಮಂಡಿಸಿದ " ಯ್ಯನ್ ಅಪ್ರೋಚ್ ಟು ಇಂಪ್ರೂವ್ ರೂಟಿಂಗ್ ಫಾರ್ ಬೆಟರ್ ಪವರ್ ಕಂಜುಮಷನ್ ಇನ್ ಮೆನೆಟ್ ಯುಸಿಂಗ್ AODV_EXT and AODV EXT_BP" ಎಂಬ ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಅಲ್ವ ರನ್ ಸನ್ ರೈಸ್ ವಿಶ್ವವಿದ್ಯಾಲಯ ಪಿ ಎಚ್ ಡಿ ಪದವಿ ನೀಡಿದೆ.

ಪ್ರಾಧ್ಯಾಪಕರಾದ ಡಾ. ಅಮಿತ್ ಜೈನ್ ಅವರ ಮಾರ್ಗದರ್ಶನದಲ್ಲಿ ಇವರು ಸಂಶೋಧನೆಯನ್ನು ಕೈಗೊಂಡಿದ್ದಾರೆ ಕಾಲೇಜಿನ ಅಧ್ಯಾಪಕರಾದ ಡಾ. ಸುರೇಶ್ ಬಡಿಗೇರ್. ಡಾ.ಪ್ರಕಾಶ್ ಬಡಿಗೇರ್. ಡಾ. ಚಂದ್ರಶೇಖರ್ ಶ್ರೀ ನಾಗರಾಜ್ ಪೂಜಾರಿ ಕಾಲೇಜಿನ ಎಲ್ಲಾ ಬೋಧಕ ಮತ್ತು ಸಿಬ್ಬಂದಿ ವರ್ಗದವರು ಶುಭ ಕೋರಿರುತ್ತಾರೆ.

# ಯುವತಿ ಕಾಣೆ ಪತ್ತೆಗೆ ಪೊಲೀಸರ ಮನವಿ

ಜನವಾದಿ ವಾರ್ತೆ



ರಾಯಚೂರು ಏ 15 – ಇಲ್ಲಿನ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಯಾದ ತನಿಷ ತಂದೆ ಕಿರಣ್ ಸೋನ (18) ಎಂಬ ಯುವತಿಯು ಡಿಪ್ಲೊಮಾ ಅಂತಿಮ ವರ್ಷದಲ್ಲಿ ವಿದ್ಯಾಬ್ಯಾಸ ಮಾಡುತ್ತಿದ್ದು, ಏಪ್ರಿಲ್ 4ರ ಬೆಳಿಗ್ಗೆ 10ಗಂಟೆಗೆ ಕಾಲೇಜಿಗೆ ಹೋಗಿ ಬರುವುದಾಗಿ ಹೇಳಿ ಹೋದವಳು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಪಶ್ಚಿಮ ಪೊಲೀಸ್ ಠಾಣೆಯಲ್ಲಿ 39/2025 ಕಲಂ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿಯು 4 ಫೀಟ್ 5 ಇಂಚು ಎತ್ತರ, ದಪ್ಪನೆಯ ಮೈಕಟ್ಟು ಹೊಂದಿದ್ದು, ಕೆಂಪು ಮೈಬಣ್ಣ, ದುಂಡು ಮೂಗು, ತಲೆಯಲ್ಲಿ ಕಪ್ಪು ಕೂದಲು ಇರುತ್ತವೆ. ಬ್ಲೂ ಬಣ್ಣದ ಚುಡಿದಾರ ಡ್ರೆಸ್ ಧರಿಸಿದ್ದು, ಕನ್ನಡ, ತೆಲಗು, ಇಂಗ್ಲೀಷ್, ಹಿಂದಿ ಬಾಷೆ ಮಾತನಾಡುತ್ತಾಳೆ.

ಈ ಯುವತಿ ಬಗೆ ಸುಳಿವು ಸಿಕ್ಕಲ್ಲಿ ಪಶ್ಚಿಮ ಪೊಲೀಸ್ ಠಾಣೆ ಪಿ.ಎಸ್.ಐ ದೂರವಾಣಿ ಸಂಖ್ಯೆ: 08532–232570, 9480803847, ಸಿ.ಪಿ.ಐ ಪಶ್ಚಿಮ ವೃತ್ತ ರಾಯಚೂರು: 08532–226856, 9480803831, ಜಿಲ್ಲಾ ನಿಸ್ತಂತು ಘಟಕ ರಾಯಚೂರು: 08532–235635,9480803800ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವಕ ಕಾಣೆ ಪತ್ತೆಗೆ ಪೊಲೀಸರ ಮನವಿ

ಜನವಾದಿ ವಾರ್ತೆ



ರಾಯಚೂರು ಏ 15 – ಇಲ್ಲಿನ ನೇತಾಜಿ ನಗರ ಪೊಲೀಸ್ ಠಾಣೆಯ ವ್ಯಾಪ್ತಿಯ ನಿವಾಸಿಯಾದ ಎಂ.ಸಚಿನ್ ತಂದೆ ಆಂಜಿನೇಯ್ಯ (25) ಎಂಬ ಯುವಕ ಮಾರ್ಚ್ 09ರ ಬೆಳಿಗ್ಗೆ 9ಗಂಟೆಗೆ ಕೆಲಸಕ್ಕೆ ಹೋಗಿ ಬರುತ್ತೇನೆಂದು ಹೋದವನ್ನು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ನೇತಾಜಿ ನಗರ ಪೊಲೀಸ್ ಠಾಣೆಯಲ್ಲಿ 39/2025ರಡಿ ಪ್ರಕರಣ ದಾಖಲಾಗಿದೆ.

5.5 ಫೀಟ್ ಎತ್ತರ, ಕೋಲು ಮುಖ, ಸಾಧರಣ ಮೈಕಟ್ಟು, ಸಾದ ಕೆಂಪು ಮೈಬಣ್ಣ, ತಲೆಯಲ್ಲಿ ಕಪ್ಪು ಬಣ್ಣದ ಕೂದಲು, ಬಿಯಾರ್ಡ ಗಡ್ಡ ಹೊಂದಿದ್ದು, ಕಪ್ಪು ಬಣ್ಣದ ಪ್ಯಾಂಟ್, ಬಿಳಿ ಬಣ್ಣದ ಅರ್ಧ ತೋಳಿನ ಶರ್ಟ್ ಧರಿಸಲಾಗಿದ್ದು, ತೆಲುಗು, ಕನ್ನಡ ಭಾಷೆ ಮಾತನಾಡುತ್ತಾನೆ. ಈ ಯುವತಿ ಬಗೆ ಸುಳಿವು ಸಿಕ್ಕಲ್ಲಿ ನೇತಾಜಿ ನಗರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532–240222, ನಗರ ಕಂಟ್ರೋಲ್ ರೂಂ: 08532–235635, 08532–235100, 9480803800 ಅಥವಾ ಪಿಎಸ್‌ಐ ಮೊಬೈಲ್ ಸಂಖ್ಯೆ: 9480803846, ಸಿಪಿಐ: 9480803831ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಅಸಮಾನತೆಗೆ ಹೋರಾಟ ಮಾಡಿದ ಧೀಮಂತ ಅಂಬೇಡ್ಕರ್ – ಶಿವರಾಜ ರುದ್ರಾಕ್ಷಿ



ಜನವಾದಿ ವಾರ್ತೆ

ದೇವದುರ್ಗ ಏ 15– ಡಾ.ಬಿ.ಆರ್. ಅಂಬೇಡ್ಕರ್ ಜಾತಿಭೇದ ಧರ್ಮ ಭೇದ ಸಾಮಾಜಿಕ ಅಸಮಾನತೆಗೆ ಹೋರಾಟ ಮಾಡಿದ ಧೀಮಂತ ರಾಷ್ಟ್ರ ನಾಯಕ ಶೋಷಿತ ಮತ್ತು ದಲಿತ ವರ್ಗಗಳ ಏಳಿಗಾಗಿ ನಮ್ಮ ರಾಷ್ಟ್ರಕ್ಕೆ ಜಾತ್ಯತೀತ ಸಂವಿಧಾನವನ್ನು ಕೊಡುಗೆಯಾಗಿ ನೀಡಿದ್ದಾರೆ ಎಂದು ಕಸಾಪ ಸಂಘಟನಾ ಕಾರ್ಯದರ್ಶಿ ಶಿವರಾಜ ರುದ್ರಾಕ್ಷಿ ಹೇಳಿದರು. ಪಟ್ಟಣದ ಮಾಳೆಗಡ್ಡೆಯಲ್ಲಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಗಲುವೇಷ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್ ಬರೆದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಜಗತ್ತಿನ ತತ್ವಜ್ಞಾನಿಗಳಲ್ಲಿ ಅಂಬೇಡ್ಕರ್‌ರು ವಿಶಿಷ್ಟ ಸ್ಥಾನಮಾನ ವ್ಯಕ್ತಿತ್ವವನ್ನು ಪಡೆದು ಭಾರತದ ರಾಷ್ಟ್ರ ನಾಯಕರಾಗಿದ್ದಾರೆ ಎಂದು ಹೇಳಿದರು. ಕಸಾಪ ತಾಲೂಕಾಧ್ಯಕ್ಷ ಎಚ್.ಶಿವರಾಜ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ವಿಚಾರಗಳು ಪ್ರತಿಯೊಬ್ಬರು ಜೀವನಕ್ಕೆ ಅಳವಡಿಸಿಕೊಳ್ಳಬೇಕು. ಅವರು ಕೊಟ್ಟಂತ ಸಂವಿಧಾನ ಮಾರ್ಗದಲ್ಲಿ ನಡೆಯಬೇಕು ಎಂದು ಹೇಳಿದರು. ಇಡೀ ವಿಶ್ವವೇ ಅವರನ್ನು ಗುಣಗಾನ ಮಾಡುತ್ತಿದ್ದಾರೆ. ಶಿಕ್ಷಣ ಸಂಘಟನೆಯಿಂದ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಈರಣ್ಣ, ಜಂಬಣ್ಣ, ಯಲ್ಲಪ್ಪ, ಗೋಪಾಲ್, ಹೊನ್ನ ಲಿಂಗಪ್ಪ, ಚಂದ್ರಶೇಖರ ರುದ್ರಾಕ್ಷಿ, ಮಹೇಂದ್ರ ಸೇರಿದಂತೆ ಇತರರು ಇದ್ದರು.

# ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿ ಆಚರಣೆ



ಜನವಾದಿ ವಾರ್ತೆ

ದೇವದುರ್ಗ ಏ 15– ಪಟ್ಟಣದ ಗುಂಡಗುರ್ತಿ ಕಾಂಪ್ಲೆಕ್‌ನಲ್ಲಿ ದೇವದುರ್ಗ ಟು ವೀಲರ್ ಮೆಕ್ಯಾನಿಕಲ್ ಅಸೋಸಿಯನ್ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಯಿತು. ಗೌರವ ಅಧ್ಯಕ್ಷ ಬಾಬು ಮೆಕಾನಿಕ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ತಮ್ಮ ಪ್ರತಿಭೆ ಮೂಲಕ ಜಗತ್ತಿನ ಮಹಾನ್ ಜ್ಞಾನಿಯಾಗಿ ಬೆಳೆದು ಭಾರತಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಅವರ ಜೀವನ ಚರಿತ್ರೆ ಪ್ರತಿಯೊಬ್ಬ–ರಿಗೂ ಪ್ರೇರಣೆಯಾಗಿದೆ. ಭಾರತಕ್ಕೆ ಅಂಬೇಡ್ಕರ್ ಕೊಡುಗೆ ಅಪಾರವಾಗಿದ್ದು ಜಗತ್ತಿನಲ್ಲೆ ಅತಿದೊಡ್ಡ ಸಂವಿಧಾನ ನೀಡಿ ಮಾದರಿಯಾಗಿದ್ದಾರೆ. ಶೋಷಿತ ಜನರ ಧ್ವನಿಯಾಗಿದ್ದ ಅಂಬೇಡ್ಕರ್ ಎಲ್ಲರಿಗೂ ಸಮಾನ ಬಾಳು, ಸಮಾನ ಅವಕಾಶ ನೀಡಿದ್ದಾರೆ. ಸಂವಿಧಾನದಲ್ಲಿ ಮೀಸಲಾತಿ ನೀಡುವ ಮೂಲಕ ಬಡವರು, ಶೋಷಿತರಿಗೆ ನ್ಯಾಯ ಒದಗಿಸಿದ್ದಾರೆ. ಎಲ್ಲ ಜನಾಂಗದ ನೆಮ್ಮದಿಯ ಬದುಕು ಕಲ್ಪಿಸಿ ಕೊಟ್ಟ ಮಹಾನ್ ನಾಯಕ್ ಅಂಬೇಡ್ಕರ್. ಅಂಬೇಡ್ಕರ್ ಒಂದು ಜಾತಿಗೆ ಸೀಮಿತವಲ್ಲ. ಎಲ್ಲ ಸರ್ವ ಜನಾಂಗದ ನಾಯಕ. ಪ್ರತಿಯೊಬ್ಬರೂ ಅಂಬೇಡ್ಕರ್ ನೀಡಿರುವ ಮೀಸಲಾತಿ ಸೌಲಭ್ಯ ಸದ್ಬಳಕೆ ಮಾಡಿಕೊಂಡು ಉನ್ನತ ಹುದ್ದೆ ಹೊಂದಬೇಕು. ಆದರ್ಶ ಜೀವನ ನಡೆಸಬೇಕು ಎಂದರು.

15ಡಿವಿಡಿ2

ದೇವದುರ್ಗ ಟು ವೀಲರ್ ಮೆಕ್ಯಾನಿಕಲ್ ಅಸೋಸಿಯನ್ ಗೌರವಾಧ್ಯಕ್ಷ ಬಾಬಾ ಮೆಕಾನಿಕ್, ಅಧ್ಯಕ್ಷ ಅಬ್ದುಲ್ ಲಿಮ್ರಾ, ಉಪಾಧ್ಯಕ್ಷ ಪರಶು ರಾಮ್, ಕಾರ್ಯದರ್ಶಿ ಮೈಬೂಬ್ ಬಾಬು, ಜಂಟಿ ಕಾರ್ಯದರ್ಶಿ ಆರೀಫ್, ಖಜಾಂಚಿ ಜುಬೇರ್, ರಮೇಶ, ಜುಬೇರ್, ಆರೀಫ್, ಆಶು, ಲಾಲಮ್, ಸೋಮಣ್ಣ, ಲಿಂಗಣ್ಣ ಇತರರಿದ್ದರು.

# ಆರೋಗ್ಯಕ್ಕೆ ಆದ್ಯತೆ ನೀಡಿ :ಸಿದ್ದರಾಮ ಪಾಟೀಲ್




ಜನವಾದಿ ವಾರ್ತೆ

ಮುದಗಲ್ ಏ 15– ನಾವೆಲ್ಲರೂ ಇತ್ತೀಚಿನ ದಿನಗಳಲ್ಲಿ ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯ ಹದೆಗೆಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರಾಂಶುಪಾಲರಾದ ಡಾ: ಸಿದ್ದರಾಮ ಪಾಟೀಲ್ ಹೇಳಿದರು

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜ್ ನಲ್ಲಿ ಮಂಗಳವಾರ ಮಹಿಳಾ ಕೋಶ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವ ಮೂಲಕ ಉದ್ಘಾಟನೆ ಮಾಡಿ ನಂತರ ಮಾತನಾಡಿ ಅವರು ನಾವೆಲ್ಲರೂ ರೋಗ ಬಂದ ಉಪಚರಿಸುವುದಕ್ಕಿಂತ ರೋಗ ಬರದಂತೆ ಮುನ್ನೆಚರಿಕೆ ವಹಿಸಬೇಕು ಮತ್ತು ಯಾವುದೆ ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯವಂತರಾಗಿ ಶಿಕ್ಷಣಕ್ಕೆ ಒತ್ತು ಕೊಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಸಮುದಾಯದ ಆರೋಗ್ಯ ಕೇಂದ್ರದ ವೈದ್ಯರಾದ ಡಾ :ಸೌಮ್ಯಶ್ರೀ, ಕಾಲೇಜ್ ಪ್ರಾಧ್ಯಾಪಕರಾದ ರವಿಚಂದ್ರ,ಎಂ, ಡಿ, ಚಿತ್ತರಗಿ,ನಾಗವರ್ಧನ ರೆಡ್ಡಿ,ಏಜಾಜ್,ನಳಿನಾದೇವಿ,ಪುಷ್ಪಶ್ಯಾಲಿನಿ, ಭವ್ಯ,ಶೋಭಾ, ಸೇರಿದಂತೆ ಅತಿಥಿ ಉಪನ್ಯಾಸಕರಿದ್ದರು.

# ಬಳ್ಳಾರಿ: ಡಿಸೆಂಬರ್–2025 ತಿಂಗಳಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆ ಕನ್ನಡದ ತೇರನ್ನು ಎಳೆಯಲು ಸಿದ್ಧರಾಗೋಣ: ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಕರೆ

ಬಳ್ಳಾರಿ ಏ 15– ಬರುವ ಡಿಸೆಂಬರ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದ್ದು, ಕನ್ನಡದ ನಾಡು–ನುಡಿ, ಭಾಷಾಭಿಮಾನ, ಕನ್ನಡದ ಅಸ್ಮಿತೆಯನ್ನು ಇನ್ನಷ್ಟು ಬೆಳೆಸುವ ನಿಟ್ಟಿನಲ್ಲಿ ಕನ್ನಡದ ತೇರನ್ನು ಎಳೆಯಲು ನಾವೆಲ್ಲರೂ ಸಿದ್ಧರಾಗೋಣ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ನಾಡೋಜ ಡಾ.ಮಹೇಶ್ ಜೋಶಿ ಕರೆ ನೀಡಿದರು.

ಅವರು, ಮಂಗಳವಾರದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡೀಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆಯ ಕುರಿತು ಪೂರ್ವಭಾವಿ ಸಭೆಯುನ್ನುದ್ದೇಶಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡಿಗರಿಗೆ ಮತ್ತು ಸಾಹಿತ್ಯ ಪ್ರೇಮಿಗಳಿಗೆ ಹಬ್ಬ. ಕನ್ನಡದ ಇತಿಹಾಸವನ್ನು ಪ್ರಚುರಪಡಿಸುವುದು ಮತ್ತು ಭಾಷೆಯನ್ನು ಬೆಳೆಸುವುದು ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ.



ಮುಖ್ಯವಾಗಿ ಸಮ್ಮೇಳನಗಳಲ್ಲಿ ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ, ಭಾಷೆ ಬೆಳವಣಿಗೆ, ಗಡಿ ಭಾಗದ ಶಾಲಾ ವಿಚಾರಗಳ ಸಂಬಂಧಿಸಿದಂತೆ ಹಲವು ನಿರ್ಣಯಗಳನ್ನು ತೆಗೆದುಕೊಂಡು ಸರ್ಕಾರದ ಮುಂದಿಡಲಾಗುತ್ತದೆ ಎಂದು ಅವರು ತಿಳಿಸಿದರು.

ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ 5 ಸಾಹಿತ್ಯ ಸಮ್ಮೇಳನಗಳು ನಡೆದಿವೆ. ಈ ಹಿಂದೆ 1920 ರಲ್ಲಿ ಮೊದಲ ಬಾರಿಗೆ ಅಖಂಡ ಜಿಲ್ಲೆಯ ಹೊಸಪೇಟೆಯಲ್ಲಿ ರೊದ್ದ ಶ್ರೀನಿವಾಸ ರಾವ್ ಅವರ ಅಧ್ಯಕ್ಷತೆಯಲ್ಲಿ 6 ನೇ ಸಮ್ಮೇಳನ ನಡೆಯಿತು. ಎರಡನೇ ಬಾರಿಗೆ ಬಾರಿಗೆ 1926 ರ ಮೇ 22 ರಿಂದ 24 ರ ವರೆಗೆ ಮೂರು ದಿನಗಳ ಕಾಲ 12 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಳ್ಳಾರಿ ನಗರದಲ್ಲಿ ನಡೆದಿತ್ತು. ಇದರ ಅಧ್ಯಕ್ಷತೆಯನ್ನು ವಚನ ಪಿತಾಮಹ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ (ಫ.ಗು.ಹಳಕಟ್ಟಿ) ಅವರು ವಹಿಸಿದ್ದರು.

ನಂತರದ 12 ವರ್ಷಗಳ ನಂತರ ಮೂರನೇ ಬಾರಿಗೆ 1938 ರ ಡಿ.29 ರಿಂದ 31 ರ ವರೆಗೆ 23 ನೇ ಕನ್ನಡ ಸಾಹಿತ್ಯ ಸಮ್ಮೇಳನ ರಂಗನಾಥ್ ದಿವಾಕರ್ ಅವರ ಅಧ್ಯಕ್ಷತೆಯಲ್ಲಿ ನಡೆದಿತ್ತು. ನಾಲ್ಕನೇ ಬಾರಿಗೆ ಹರಪನಹಳ್ಳಿಯಲ್ಲಿ 1947 ರಲ್ಲಿ ಸಿ.ಕೆ.ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಳಿಕ 11 ವರ್ಷಗಳ ನಂತರ 1958 ರ ಜ. 18 ರಿಂದ 20 ರ ವರೆಗೆ ವಿನಾಯಕ್ ಕೃಷ್ಣ ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ನಗರದ ಮುನ್ಸಿಪಲ್ ಕಾಲೇಜು ಮೈದಾನದಲ್ಲಿ 5 ನೇ ಬಾರಿಗೆ ನಡೆಯಿತು. ಈಗ 67 ವರ್ಷದ ಬಳಿಕ ಮರಳಿ ಸಾಹಿತ್ಯ ಸಮ್ಮೇಳನದ ಆತಿಥ್ಯ ದೊರೆತಿದೆ. 2025 ರ ಡಿಸೆಂಬರ್ ಮಾಹೆಯಲ್ಲಿ ಆಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ಅವರು ತಿಳಿಸಿದರು.

ಇಂದಿನ ಪೀಳಿಗೆಗೆ ಮತ್ತು ಯುವಸಮುದಾಯಕ್ಕೆ ಕನ್ನಡ ಸಾಹಿತ್ಯ ಬಗೆಗಿನ ಅರಿವು ಮೂಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾಡಳಿತ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರುಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ ಮಾಹೆಯಲ್ಲಿ ಬಳ್ಳಾರಿಯಲ್ಲಿ ಅದ್ದೂರಿಯಾಗಿ ಆಯೋಜಿಸಲಾಗುತ್ತಿದೆ ಎಂದರು.

ಡಿಸೆಂಬರ್ ತಿಂಗಳಲ್ಲಿ ವಾತಾವರಣ ಮತ್ತು ಹವಮಾನವು ಚೆನ್ನಾಗಿರುವುದರಿಂದ ಆಯೋಜನೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯದಂತೆ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ವಿಶ್ವ–ವಿದ್ಯಾಲಯಗಳ ವಿದ್ಯಾರ್ಥಿಗಳು, ಶಾಲಾ–ಕಾಲೇಜು, ವಸತಿ ನಿಲಯಗಳ ಮಕ್ಕಳು ಸೇರಿದಂತೆ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಅವರು ಹೇಳಿದರು.

ಜಿಲ್ಲೆಯ ಶಾಲಾ–ಕಾಲೇಜುಗಳಿಗೆ ಭೇಟಿ ನೀಡುತ್ತಿರುವ ಪರಿಷತ್ತಿನ ಪದಾಧಿಕಾರಿಗಳು, ವಿದ್ಯಾರ್ಥಿಗಳಿಗೆ ಸಮ್ಮೇಳನ ಕುರಿತು ಮನವರಿಕೆ ಮಾಡಿಕೊಡುವ ಮೂಲಕ ಸಮ್ಮೇಳನದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಬಳ್ಳಾರಿಯಲ್ಲಿ ಡಿಸೆಂಬರ್ ತಿಂಗಳಲ್ಲಿ ಆಯೋಜಿಸಲಾಗುತ್ತಿರುವ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಳ್ಳಾರಿ ಜಿಲ್ಲೆಯ ಮೊದಲ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಸರ್ ಥಾಮಸ್ ಮುನ್ರೋ ಅವರ ಕುಟುಂಬಸ್ಥರನ್ನು ವಿಶೇಷ ಆಹ್ವಾನಿತರನ್ನಾಗಿ ಆಹ್ವಾನಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ನಾಡೋಜ ಡಾ.ಮಹೇಶ್ ಜೋಶಿ ಅವರು ತಿಳಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಜಿಲ್ಲೆಯಲ್ಲಿ ಆಯೋಜಿಸಲಾಗುತ್ತಿರುವ ಅಖಿಲ ಭಾರತ 88ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಮತ್ತು ಅಚ್ಚು–ಕಟ್ಟಾಗಿ ಆಯೋಜಿಸುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ ಶೋಭಾರಾಣಿ, ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷ ಪಟೇಲ್ ಪಾಂಡು, ಜಿಲ್ಲಾಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

**CITATION**

**IN THE COURT OF HON'BLE PRINCIPAL CIVIL JUDGE AND JMFC AT LINGASUGUR.**

Crim. Misc., No: 567/2025

Adappa S/o Hanumanthappa, Age: 24 years, Occ: Labour, R/o Sarjapur, Tq: Lingasugur, Dist: Raichur and 3 others.

... Petitioners

V//s

1. The Tahasildar Lingasugur.
2. To-whom-so-ever it may concern.

... Respondants

Claim: Petition U/Sec 13(3) of Kant. Birth & Death Registration Act.

It is to be informed you that the above named petitioners has filed Crim., Misc., No: 567/2025 on the file of this court for the purpose of obtaining the death certificate his father by name **Hanamanthappa S/o Amarappa** who died on 27-03-2022 at Sarjapur village Tq: Lingasugur for getting mutation of his landed properties. If anybody is having any claim or objections of whatsoever in the said matter may appear in person or through a pleader before this court on 16/05/2025 failing which the matter will be heard and decided as ex-parte.

Given under my hand and seal of this court on this 15th day of April 2025 at Lingasugur.

Through:
sd/-
Balaraj sagar Manamatti
Advocate, Lingasugur.

// By order of the court //
sd/-
(Smt. Manjula Gudi)
Chief Ministerial Officer
Prl Civil Judge & J.M.F.C Court
Lingasugur.

# ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಉತ್ತಮ ಚಿಕಿತ್ಸೆ ಪಡೆಯಿರಿ – ಡಾ.ಶರಣಪ್ಪ ಬಲ್ಲಟಗಿ

ಜನವಾದಿ ವಾರ್ತೆ



ಮಾನ್ವಿ ಏ 15 – ಪಟ್ಟಣದ ಕೆ.ಪಿ.ಎಸ್.ವಿ.ಎಸ್.ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯಲ್ಲಿ ಲಯನ್ಸ್ ಕ್ಲಬ್ ಮಾನವಿ, ಸಪ್ತಗಿರಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್ ಸೆಂಟರ್ ಬೆಂಗಳೂರು, ಕೆ.ಪಿ.ಎಸ್.ವಿ.ಎಸ್. ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಸಹಯೋಗದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಭಾರತೀಯ ವೈದ್ಯಕೀಯ ಸಂಘದ ತಾ.ಅಧ್ಯಕ್ಷರಾದ ಡಾ. ಶರಣಪ್ಪ ಬಲ್ಲಟಗಿ ಉದ್ಘಾಟಿಸಿ ಮಾತನಾಡಿ ಮಾನ್ವಿ ಪಟ್ಟಣದಲ್ಲಿ ಗ್ರಾಮೀಣ ಭಾಗದ ಜನರಿಗೆ ಅಗತ್ಯವಾದ ಆರೋಗ್ಯ ಸೌಲಭ್ಯ ಹಾಗೂ ಗುಣಮಟ್ಟದ ಚಿಕಿತ್ಸೆಯನ್ನು ನೀಡಬೇಕು ಎನ್ನುವ ಉದ್ದೇಶದಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಅಯೋಜಿಸಲಾಗಿದ್ದು ಶಿವಿರದಲ್ಲಿ ಬೆಂಗಳೂರಿನ ಸೂಪರ್ ಸ್ಪೆಶಲಿಸ್ಟ್ ವೈದ್ಯರು ಸಾರ್ವಜನಿಕರ ಆರೋಗ್ಯ ತಪಾಸಣೆಯನ್ನು ನಡೆಸಿ ಅಗತ್ಯ ಚಿಕಿತ್ಸೆಯನ್ನು ನೀಡಲಿದ್ದು ಸಾರ್ವಜನಿಕರು ಶಿಬಿರದ ಉಪಯೋಗ ಪಡೆದುಕೊಳ್ಳುವಂತೆ ಕೋರಿದರು.

ಕಾರ್ಯಕ್ರಮದಲ್ಲಿ ಕೆ.ಪಿ. ಎಸ್.ವಿ.ಎಸ್.ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಜೀವನೇಶ್ವರಯ್ಯ, ಲಯನ್ಸ್ ಕ್ಲಬ್ ಮಾನವಿ ಮಾಜಿ ಅಧ್ಯಕ್ಷರಾದ ಡಾ.ಚಂದ್ರಶೇಖರ ಸುವರ್ಣಗೀರಿ ಮಠ,ತಾ.ಕಾರ್ಯದರ್ಶಿ ಉಮಾ ಶಂಕರ ಹೆಚ್.ಎಂ,ಗುಮ್ಮ ಬಸವರಾಜ ವಕೀಲರು, ಖಜಾಂಚಿ ಸುಬ್ಬರಾವ್ ಚೌದರಿ,ಕೆ. ಶಂಕರಗೌಡ, ಎ.ವೈ. ದೇವರಮನಿ, ರಾಮಾಂಜನೇಯ್ಯ ಶೆಟ್ಟಿ, ಹಾಗೂ ವೈದ್ಯರಾದ ಡಾ .ವಿಕ್ರಮಾದಿತ್ಯ ಜಾಂಗೀರ, ಡಾ.ಶ್ರೀಕಾಂತ ಕುಲಕರ್ಣಿ, ಡಾ. ಶರಣಮ್ಮ, ಜುಬೇರ್, ಡಾ.ಮಮತ ಆದೋನಿ, ಸೇರಿದಂತೆ ಕೆ.ಪಿ.ಎಸ್.ವಿ.ಎಸ್.ಆಯುರ್ವೇದಿಕ್ ಮೆಡಿಕಲ್ ಕಾಲೇಜ್‌ನ ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದರು.

ಸಪ್ತಗಿರಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಮತ್ತು ರಿಸರ್ಚ್ ಸೆಂಟರ್ ಬೆಂಗಳೂರಿನ ತಜ್ಞ ವೈದ್ಯ–ರಿಂದ ಹೃದಯ ರೋಗ, ಎಲುಬು. ಕೀಲು, ಕ್ಯಾನ್ಸರ್ ರೋಗ, ನೇತ್ರ ತಪಾಸಣೆಯನ್ನು ತಜ್ಞಾ ವೈದ್ಯರು ನಡೆಸಿದರು ಶಿಬಿರದಲ್ಲಿ ಉಚಿತವಾಗಿ ಇ.ಸಿ.ಜಿ. ರಕ್ತದೊತ್ತಡ, ಮಧುಮೇಹ ಪರೀಕ್ಷೆ ಯನ್ನು ನಡೆಸಲಾಯಿತು ಹಾಗೂ ವೈದ್ಯರು ಸೂಚಿಸಿದ ಔಷಧಿಗಳನ್ನು ಉಚಿತವಾಗಿ ರೋಗಿಗಳಿಗೆ ವಿತ–ರಿಸಲಾಯಿತು. ಆರೋಗ್ಯ ತಪಾಸಣೆ ಶಿಬಿರದಲ್ಲಿ ನೂರಾರು ರೋಗಿಗಳು ಚಿಕಿತ್ಸೆಯನ್ನು ಪಡೆದರು.

# ಮಹಿಳಾ ಸಮಾನತೆಯ ಹರಿಕಾರ ಅಂಬೇಡ್ಕರ್ –ಬಸವಣ್ಣಪ್ಪ ಕಲಶೆಟ್ಟಿ

ಜನವಾದಿ ವಾರ್ತೆ



ಲಿಂಗಸಗೂರು ಏ 15– ದೇಶ ಕಂಡ ಮಹಾನ್ ಬುದ್ಧಿವಂತ ವ್ಯಕ್ತಿ,ಸರ್ವರಿಗೂ ಸಮಪಾಲು ಸರ್ವರಿಗೂ ಸಮಾನ ಅವಕಾಶವನ್ನು ತಂದು ಕೊಟ್ಟ ಮಹಾನ್ ಚೇತನ ಅಂಬೇಡ್ಕರ್, ಮಹಿಳೆಯರ ಪರವಾಗಿ ಹಿಂದೂ ಕೋಡ್ ಬಿಲ್ ಗಾಗಿ ಹೋರಾಡಿ ಮಹಿಳೆರಿಗೆ ಸ್ಥಾನ ಮಾನ ಕಲ್ಪಿಸಿ ಕೊಟ್ಟ ಹರಿಕಾರ ಡಾ : ಬಿ ಆರ್ ಅಂಬೇಡ್ಕರ್ ಎಂದು ಸಹಾಯಕ ಆಯುಕ್ತ ಬಸವಣ್ಣಪ್ಪ ಕಳಶೆಟ್ಟಿ ಹೇಳಿದರು.

ಡಾ: ಬಿ ಆರ್ ಅಂಬೇಡ್ಕರ್ ಅವರ 134 ನೇ ಜಯಂತಿಯನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು.ಅಂಬೇಡ್ಕರ್ ಸಮಾನತೆಯ ಹರಿಕಾರ, ಸಂವಿಧಾನ ಶಿಲ್ಪಿಯಾದ ಇವರು ಮಹಿಳಾ ಹಿಂದೂ ಕೋಡ್ ಬಿಲ್ ಜಾರಿಗೆ ತರುವದರ ಜೊತೆಗೆ ದೇಶದಲ್ಲಿ ಸಮಾನತೆಯನ್ನು ಜಾರಿಗೆ ಕಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಸಮಾಜದಲ್ಲಿ ಸಮಾನತೆ ಬರಬೇಕು ಅಂದರೆ ಇದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಅಂಬೇಡ್ಕರ್ ಹೇಳಿದ್ದಾರೆ ಆದ್ದರಿಂದ ಎಲ್ಲರೂ ವಿದ್ಯಾವಂತರಾಗಿದ್ದಾರೆ. ಮಹಿಳಾ ಸಮಾನತೆಗಾಗಿ ಕೇಂದ್ರ ಕಾನೂನು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲು ಸಿದ್ದರಿದ್ದರು.ಇವತ್ತು ಮಹಿಳೆಯರಿಗೆ ಸ್ಥಾನ ಮಾನ ಸಿಕ್ಕಿದೆ ಅಂದರೆ ಅದಕ್ಕೆ ಅಂಬೇಡ್ಕರ್ ಕಾರಣ.ಅಂಬೇಡ್ಕರ್ ಆಶಯದಂತೆ ಸಮಾಜದಲ್ಲಿ ಸಮಾನತೆ ಸಿಗಬೇಕು ಸಿಕ್ಕಾಗ ಮಾತ್ರ ಅಂಬೇಡ್ಕರ್ ಜಯಂತಿಗೆ ಅರ್ಥ ಬರುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯೆ ಶರಣಗೌಡ ಪಾಟೀಲ್ ಬಯ್ಯಾಪುರ, ಮಾತನಾಡಿ,ಅಂಬೇಡ್ಕರ್ ಸಮ ಸಮಾಜದ ಶಕ್ತಿ ಜಾತಿ ಮತ ಪಂತವನ್ನು ಬಿಟ್ಟು ನಾವೆಲ್ಲರೂ ಒಂದು ಎಂದು ಸಾರಿದ ಮಹಾನ್ ನಾಯಕ ಸಂವಿಧಾನ ಜಾರಿಗೆ ಬಂದು 75 ವರ್ಷಗಳಾದರೂ ಕೂಡ ಭಾರತ ಅಂಬೇಡ್ಕರ್ ಕಂಡಂತ ಅವರ ಕನಸು ಇವತ್ತಿಗೂ ನನಸಾಗುತ್ತಿಲ್ಲ ಇದಕ್ಕೆ ಕಾರಣವನ್ನು ಕಂಡು ಕೊಂಡಾಗ ಮಾತ್ರ ಅವರ ಕನಸು ನನಸಾಗುತ್ತೆ ಅಂಬೇಡ್ಕರ ರಚಿಸಿದ ಭಾರತೀಯ ಸಂವಿಧಾನ ಈ ದೇಶದ ಪವಿತ್ರ ಗ್ರಂಥ,ಇವತ್ತು ನಾವೆಲ್ಲರೂ ಸುಖ ಸಂತೋಷದಿಂದ ಇದ್ದೇವೆ ಎಂದರೆ ಅದಕ್ಕೆ ಅಂಬೇಡ್ಕರ್ ಕಾರಣ ಎಂದು ಹೇಳಿದರು.

ಗ್ಯಾರಂಟಿ ಯೋಜನೆಯ ಜಿಲ್ಲಾ ಅಧ್ಯಕ್ಷ ಪಾಮಯ್ಯ ಮುರಾರಿ ಮಾತನಾಡಿ.

ಶಿಕ್ಷಣ ನಮಗೆ ಅವಶ್ಯಕತೆ ಇದೆ ಆದ್ದರಿಂದ ಎಲ್ಲರು ವಿದ್ಯಾವಂತರಾಗಿ ಎಂದರು. ಕಾರ್ಮಿಕರ ಕಲ್ಯಾಣಕ್ಕಾಗಿ, ಮಹಿಳೆಯರಿಗಾಗಿ, ಸಾಕಷ್ಟು ಕೊಡುಗೆ ನೀಡಿದ್ದಾರೆ. ಆದರೆ ಇವತ್ತು ಸರ್ಕಾರಗಳು ಸಂವಿಧಾನ ಬದಲಾಯಿಸಲು ಸಂಚು ರೂಪಿಸುತ್ತಿದ್ದಾರೆ, ಸಂವಿಧಾನ ಸಂಕಷ್ಟದಲ್ಲಿದೆ ಆದ್ದರಿಂದ ನಾವೆಲ್ಲರೂ ಸಂವಿಧಾನ ರಕ್ಷಿಸಲು ಹೋರಾಟಕ್ಕೆ ಸಿದ್ದರಾಗೋಣ ಎಂದು ಹೇಳಿದರು.

ವಿಶೇಷ ಉಪನ್ಯಾಸ ನೀಡಿದ ಆರ್. ಮಾನಸಯ್ಯ ನವರು ಮಾತನಾಡಿ ಈ ಕಾರ್ಯಕ್ರಮದಲ್ಲಿ ಶಾಸಕರು ಇರಬೇಕಿತ್ತು. ಲಿಂಗಸಗೂರು ಮೀಸಲು ಕ್ಷೇತ್ರ ಆದರೆ ಈ ಕ್ಷೇತ್ರದ ಹಿರಿಯ ಮಗ ಶಾಸಕರು ಆಗಿರತಾರೆ ಹತ್ತು ದಿನಗಳ ಕಾಲ ದಸರಾ ದರ್ಬಾರ್ ಮಾಡುತ್ತೀರಿ ಆದರೆ ಅಂಬೇಡ್ಕರ್ ಜಯಂತಿ ನಿಮಗೆ ಬೇಡವಾಹಿತಾ ಮಾನಪ್ಪ ವಜ್ಜಲ್ ಅವರೇ, ನೀವು ನಿಮ್ಮ ಜವಾಬ್ದಾರಿ ಮರೆಯುತ್ತಿದ್ದೀರಾ ಎಂದು ಶಾಸಕರನ್ನು ತರಾಟೆಗೆ ತಗೆದು ಕೊಂಡರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪುರಸಭೆಯ ಅಧ್ಯಕ್ಷ ಬಾಬುರಡ್ಡಿ ಮುನ್ನೂರು ವಹಿಸಿಕೊಂಡಿದ್ದರು.ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪುನ ಗೌಡ ಪಾಟೀಲ್ ಕರಡಕಲ್ ಸೇರಿದಂತೆ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್,ಎ ಪಿ ಎಂ ಸಿ ಅಧ್ಯಕ್ಷ ಅಮರೇಶ ಹೆಸರೂರ್,ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಸಣ್ಣ ಮೇಟಿ, ನೌಕರರ ಸಂಘದ ಅಧ್ಯಕ್ಷ ಹಾಜಿಬಾಬು, ಪರಿಶಿಷ್ಟ ಪಂಗಡ ಅಧಿಕಾರಿ ಮಂಜುಳಾ ಸುಡಿ, ಸಿ ಡಿ ಪಿ ಓ ಗೋಕುಲ್ ಸಾಬ್, ಬಿ ಸಿ ಎಂ ಅಧಿಕಾರಿ, ರಮೇಶ್ ರಾಠೋಡ್, ಪುರಸಭೆ ವ್ಯವಸ್ಥಾಪಕ ಹನುಮಂತ ನಾಯಕ,ಅಲ್ಪ ಸಂಖ್ಯಾತರ ಇಲಾಖೆ ಅಧಿಕಾರಿ ಷಡಕ್ಷರಿ ಸೇರಿದಂತೆ ಮುಂತಾದ ಅಧಿಕಾರಿಗಳು, ಮುಖಂಡರು. ಇದ್ದರು.

# ಇಂದು ಕಲಬುರಗಿಯಲ್ಲಿ ಬೃಹತ್ ಉದ್ಯೋಗ ಮೇಳ ಕೆ.ಕೆ.ಆರ್.ಟಿ.ಸಿ ನಿಗಮದಿಂದ 292 ಹೆಚ್ಚುವರಿ ಬಸ್‌ಗಳ ಕಾರ್ಯಾಚರಣೆ: ಎಂ.ರಾಚಪ್ಪ

ಜನವಾದಿ ವಾರ್ತೆ

ರಾಯಚೂರು ಏ 15 – ಕಲಬುರಗಿಯ ಕೆ.ಸಿ.ಟಿ. ಕಾಲೇಜಿನ ಆವರಣದಲ್ಲಿ ಇದೇ ಏಪ್ರಿಲ್ 16 ರಂದು ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ–ಯುವ ಸಮೃದ್ಧಿ ಸಮ್ಮೇಳನ ಹಮ್ಮಿಕೊಳ್ಳಲಾಗಿದ್ದು, ಉದ್ಯೋಗ ಮೇಳದಲ್ಲಿ ಭಾಗವಹಿಸಲಿರುವ ಕಲ್ಯಾಣ ಕರ್ನಾಟಕ ಪ್ರದೇಶದ ಉದ್ಯೋಗಾಕಾಂಕ್ಷಿಗಳು ಅಯಾ ಜಿಲ್ಲೆಯಿಂದ ಕಲಬುರಗಿಗೆ ಆಗಮಿಸಲು ನಿಗಮದಿಂದ ಒಟ್ಟು 292 ಹೆಚ್ಚುವರಿ ಬಸ್ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪ ಅವರು ತಿಳಿಸಿದ್ದಾರೆ.

ಏಪ್ರಿಲ್ 16 ರಂದು ರಾಯಚೂರ ವಿಭಾಗದ ವ್ಯಾಪ್ತಿಯ ರಾಯಚೂರು ಘಟಕದಿಂದ 9– ಬಸ್‌ಗಳು ಬೆಳಗ್ಗೆ 5 ಗಂಟೆಯಿಂದ ಪ್ರತಿ 15 ನಿಮಿಷಕ್ಕೆ ಒಂದರಂತೆ ಕಲಬುರಗಿಗೆ ಕಾರ್ಯಚರಣೆ ಮಾಡಲಿವೆ. ಇನ್ನು ಲಿಂಗಸೂಗೂರು ಮತ್ತು ಸಿಂಧನೂರು ಘಟಕಗಳಿಂದ ತಲಾ 5, ಮಾನ್ವಿ ಘಟಕದಿಂದ 6, ದೇವದುರ್ಗ ಘಟಕದಿಂದ–4 ಹಾಗೂ ಮಸ್ಕಿ ಘಟಕದಿಂದ 3 ಬಸ್‌ಗಳು ಪ್ರತಿ ಅರ್ಧ ಗಂಟೆಗೊಂದರಂತೆ ಕಾರ್ಯಾಚರಣೆ ಮಾಡಲಿವೆ ಎಂದರು.

ಕಲಬುರಗಿ ವಿಭಾಗ–1 ಮತ್ತು 2 ರಿಂದ 105, ಯಾದಗಿರಿ ವಿಭಾಗದಿಂದ 37, ಬೀದರ ವಿಭಾಗದಿಂದ 46, ರಾಯಚೂರು ವಿಭಾಗದಿಂದ 32 ಬಸ್ ಗಳು ಹೆಚ್ಚುವರಿ ಕಾರ್ಯಚರಣೆ ಮಾಡಲಿವೆ. ಇನ್ನು ಏಪ್ರಿಲ್ 15ರ ಸಂಜೆ ಕೊಪ್ಪಳ ವಿಭಾಗದಿಂದ 18, ಬಳ್ಳಾರಿ ಮತ್ತು ಹೊಸಪೇಟೆ ವಿಭಾಗದಿಂದ ತಲಾ 12 ಬಸ್ ಗಳು ಕಾರ್ಯಚರಣೆ ಮಾಡಲಿವೆ. ಇದಲ್ಲದೆ ಏಪ್ರಿಲ್ 16 ರಂದು ಕೊಪ್ಪಳ, ಬಳ್ಳಾರಿ ಹಾಗೂ ಹೊಸಪೇಟೆ ವಿಭಾಗದಿಂದ ಬೆಳಗ್ಗಿನ ನಸುಕಿನ ಜಾವದಲ್ಲಿ ತಲಾ 10 ಹೆಚ್ಚುವರಿ ಬಸ್ ಗಳು ಕಲಬುರಗಿಯತ್ತ ಪ್ರಯಾಣಸಲಿದ್ದು, ಉದ್ಯೋಗಾಕಾಂಕ್ಷಿ ಅಭ್ಯರ್ಥಿಗಳು ಇದರ ಲಾಭ ಪಡೆಯಬೇಕೆಂದು ಅವರು ಕೋರಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ರಾಯಚೂರು–1 ಘಟಕ ದೂರವಾಣಿ ಸಂಖ್ಯೆ: 7760992363, ರಾಯಚೂರು–2ರ ಘಟಕದ ದೂರವಾಣಿ ಸಂಖ್ಯೆ: 7760992364, ರಾಯಚೂರು–3ರ ಘಟಕ ದೂರವಾಣಿ ಸಂಖ್ಯೆ: 7619351087, ಲಿಂಗಸುಗೂರು ಘಟಕ ದೂರವಾಣಿ ಸಂಖ್ಯೆ: 7760992365, ಸಿಂಧನೂರು ಘಟಕ ದೂರವಾಣಿ ಸಂಖ್ಯೆ: 7760992366, ಮಾನವಿ ಘಟಕ ದೂರವಾಣಿ ಸಂಖ್ಯೆ: 7760992367, ದೇವದುರ್ಗ ಘಟಕ ದೂರವಾಣಿ ಸಂಖ್ಯೆ: 7760992368, ಮಸ್ಕಿ ಘಟಕ ದೂರವಾಣಿ ಸಂಖ್ಯೆ: 7760992361ಗೆ ಸಂಪರ್ಕ ಮಾಡಬಹುದಾಗಿದೆ ಎಂದು ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಚಂದ್ರಶೇಖರ್ ಎಮ್.ಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಾ: ಬಿ, ಆರ್, ಅಂಬೇಡ್ಕರ್ ಜಯಂತಿ ಆಚರಣೆ



ಜನವಾದಿ ವಾರ್ತೆ

ಮುದಗಲ್ ಏ 15– ಪಟ್ಟಣ ಸಮೀಪದ ರಾಮತ್ನಾಳ ಗ್ರಾಮದ ಕರುನಾಡ ವಿಜಯ ಸೇನೆ ಗ್ರಾಮ ಘಟಕ ವತಿಯಿಂದ ಸಂವಿಧಾನ ಶಿಲ್ಪಿ ಡಾ : ಬಿ, ಆರ್, ಅಂಬೇಡ್ಕರ್ ಜಯಂತಿ ಆಚರಣೆ ಮಾಡಿದರು

ಡಾ: ಬಿ, ಆರ್, ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಕರುನಾಡ ವಿಜಯ ಸೇನೆ ಅಧ್ಯಕ್ಷ ಸಂಗನಗೌಡ ಪಾಟೀಲ್ ಹೂ ಮಾಲೆ ಹಾಕಿ ಪೂಜೆ ಸಲ್ಲಿಸುವ ಮೂಲಕ ಜಯಂತಿ ಆಚರಣೆ ಮಾಡಿದರು ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಅಂದಪ್ಪ ನಾಯಕ,ಮಂಜುನಾಥ ಮಾದರ,ಕೃಷ್ಣ ಚಲುವಾದಿ,ಶರಣಗೌಡ ಪಾಟೀಲ್,ಬಸವರಾಜ ನಾಯಕ,ಶರಣಬಸವ ,ಹನುಮಂತ ಚಲುವಾದಿ, ಸೇರಿದಂತೆ ಮುಂತಾದವರು ಇದ್ದರು.

# ಸಿರವಾರ ಪಟ್ಟಣಕ್ಕೆ ಕುಡಿಯುವ ನೀರಿನ ಕೆರೆ ನಿರ್ಮಾಣಕ್ಕೆ ಶಾಸಕರಿಂದ ಸ್ಥಳ ಪರಿಶೀಲನೆ

ಜನವಾದಿ ವಾರ್ತೆ



ಸಿರವಾರ ಏ 15– ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕೆರೆ ನಿರ್ಮಾಣಕ್ಕೆ ಬಹಳಷ್ಟು ದಿನಗಳಿಂದ ಇರುವ ಬೇಡಿಕೆಗೆ ಪೂರಕವಾಗಿ ಶಾಸಕ ಜಿ ಹಂಪಯ್ಯ ನಾಯಕ ಅವರು ಕೆರೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ನಡೆಸಿದರು.

ದೇವದುರ್ಗ ರಸ್ತೆಯ ತುಂಗಭದ್ರಾ ಕಾಲುವೆ ಹತ್ತಿರದಲ್ಲಿರುವ ಸರ್ವೆ ನಂಬರ್ 95 ರ 6 ಎಕರೆ ಸರ್ಕಾರಿ ಜಮೀನನ್ನು ಕುಡಿಯುವ ನೀರಿನ ಕೆರೆ ನಿರ್ಮಾಣಕ್ಕೆ ಗುರುತಿಸಿದ್ದು, ಶಾಸಕರು ಹಾಗು ತಹಶಿಲ್ದಾರ ರವಿ ಎಸ್ ಅಂಗಡಿ ಮಂಗಳವಾರ ಸ್ಥಳ ಪರಿಶೀಲನೆ ನಡೆಸಿದರು.

ಪಂಚ ಗ್ಯಾರಂಟಿ ಯೋಜನೆ ಗಳ ಅನುಷ್ಠಾನ ಸಮಿತಿಯ ತಾಲೂಕ ಅಧ್ಯಕ್ಷ ಬ್ರಿಜೇಶ ಪಾಟೀಲ, ಪ.ಪಂ ಅಧ್ಯಕ್ಷ ವೈ ಭೂಪನಗೌಡ, ಮುಖಂಡರಾದ ರಮೇಶ ದರ್ಶನಕರ್,ಅರಿಕೇರಿ ಶಿವಶರಣ ಸಾಹುಕಾರ,ಪ.ಪಂ ಸದಸ್ಯ ಸೂರಿ ದುರಿಗಣ್ಣ ನಾಯಕ ಸೇರಿದಂತೆ ಇತರರು ಇದ್ದರು.

# ನಲವತ್ತೈದು ವರ್ಷಗಳ ಹಿಂದೆ ಇದು ನಡೆಯದಿದ್ದರೆ






ನಲವತ್ತೈದು ವರ್ಷಗಳ ಹಿಂದೆ ಆ ಬೆಳವಣಿಗೆ ಸಂಭವಿಸದೆ ಹೋಗಿದ್ದರೆ ಕರ್ನಾಟಕದ ರಾಜಕಾರಣ ಐತಿಹಾಸಿಕ ತಿರುವು ಪಡೆಯುತ್ತಿತ್ತೇ?

ಈ ಪ್ರಶ್ನೆ ರಾಜ್ಯ ರಾಜಕೀಯದ ಒಳವಲಯಗಳಲ್ಲಿ ಆಗಾಗ ಚರ್ಚೆಯಾಗುತ್ತಲೇ ಇರುತ್ತದೆ.

ಅಂದ ಹಾಗೆ ನಲವತ್ತೈದು ವರ್ಷಗಳ ಹಿಂದೆ ಆ ಬೆಳವಣಿಗೆ ನಡೆದ ಕೆಲವೇ ಕಾಲದಲ್ಲಿ,ಅಂದರೆ 1983 ರಲ್ಲಿ ಕರ್ನಾಟಕ ಮೊಟ್ಟ ಮೊದಲ ಕಾಂಗ್ರೆಸ್ಸೇತರ ಸರ್ಕಾರವನ್ನು ನೋಡಿತು.

ಒಂದು ವೇಳೆ 1980 ರಲ್ಲಿ ಈ ನಿರ್ದಿಷ್ಟ ಬೆಳವಣಿಗೆ ನಡೆಯದೆ ಹೋಗಿದ್ದರೆ 1983 ರಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬರಲು ಸಾಧ್ಯವಿರಲಿಲ್ಲ ಅಂತ ಈಗಲೂ ಬಹುತೇಕ ರಾಜಕೀಯ ತಜ್ಞರು ವಾದಿಸುತ್ತಾರೆ.

ಅಂದ ಹಾಗೆ 1980 ರಲ್ಲಿ ನಡೆದ ಆ ಬೆಳವಣಿಗೆ ಎಂದರೆ ಮುಖ್ಯಮಂತ್ರಿ ದೇವರಾಜ ಅರಸರ ಪದಚ್ಯುತಿ.

1972 ರಿಂದ 1980 ರವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು ಇತಿಹಾಸದ ಚಕ್ರಕ್ಕೆ ವೇಗ ತಂದರು.ಶೋಷಿತ ವರ್ಗಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಿದರು.

ಅವರು ಉಳುವವನೇ ಹೊಲದೊಡೆಯ ಎಂಬ ಕ್ರಾಂತಿಕಾರಿ ಮಂತ್ರವನ್ನು ಜಪಿಸಿದ ಪರಿಣಾಮವಾಗಿ ನಾಡಿನ ಭೂ ಸಂಪತ್ತಿನ ಒಂದು ಭಾಗ ಶೋಷಿತ ವರ್ಗಗಳ ಕೈ ಸೇರಿತು.

ಆರ್ಥಿಕವಾಗಿ,ರಾಜಕೀಯವಾಗಿ,ಶೈಕ್ಷಣಿಕವಾಗಿ ಶೋಷಿತ ವರ್ಗಗಳು ಬಲಿಷ್ಟವಾಗದಿದ್ದರೆ ಅವು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಿಲ್ಲ ಎಂಬ ಅರಿವಿನಿಂದ ಅವರು ಮಾಡಿದ ಕೆಲಸ ಸಹಜವಾಗಿಯೇ ಅವರನ್ನು ಸಾಮಾಜಿಕ ಕ್ರಾಂತಿಯ ಹರಿಕಾರ ಎಂದು ಗುರುತಿಸುವಂತೆ ಮಾಡಿತು.

ಅರಸರ ಈ ಕೆಲಸದ ಫಲವನ್ನು ನೋಡಲು ಕಾಂಗ್ರೆಸ್ ಬಹುಕಾಲ ಕಾಯಬೇಕಾಗಲಿಲ್ಲ.

ಅಂದರೆ?1972 ರಿಂದ 1978 ರ ಅವಧಿಯಲ್ಲಿ ಅವರು ಜಾರಿಗೆ ತಂದ ಕಾರ್ಯಕ್ರಮಗಳು 1978 ರಲ್ಲಿ ಕಾಂಗ್ರೆಸ್ ಪಕ್ಷವನ್ನು ಪುನ: ಅಧಿಕಾರದ ಗದ್ದುಗೆಗೇರಿಸಿದವು.

ಹಾಗೆ ನೋಡಿದರೆ 1978 ರ ಗೆಲುವು ಕೂಡಾ ಸಣ್ಣ ಸಾಧನೆಯಾಗಿರಲಿಲ್ಲ. ಯಾಕೆಂದರೆ ಆ ಹೊತ್ತಿಗಾಗಲೇ ದೇಶದಲ್ಲಿ ಇಂದಿರಾ ವಿರೋಧಿ ಅಲೆ ಸುನಾಮಿಯ ರೂಪ ಪಡೆದಿತ್ತು.ಅದರ ವೇಗಕ್ಕೆ ದೇಶದ ಬಹುತೇಕ ಕಡೆ ಕಾಂಗ್ರೆಸ್ ಸರ್ಕಾರಗಳು ಮಗುಚಿ ಬಿದ್ದಿದ್ದವು.

ಆದರೆ ರಾಷ್ಟ್ರ ರಾಜಕಾರಣ ತಲುಪಿದ್ದ ಅಂತಹ ಸಂಕೀರ್ಣ ಕಾಲಘಟ್ಟದಲ್ಲೂ ಅರಸು ನೇತೃತ್ವದ ಕಾಂಗ್ರೆಸ್ ಕರ್ನಾಟಕದ ಅಧಿಕಾರ ಸೂತ್ರವನ್ನು ಮರುವಶ ಮಾಡಿಕೊಂಡಿತ್ತು.

ಇದಾದ ನಂತರ ಕರ್ನಾಟಕದ ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಸತತ ಎರಡು ಬಾರಿ ಗೆದ್ದ ಉದಾಹರಣೆಯೇ ಇಲ್ಲ.ಆದರೆ ಇಂತಹ ಸಾಧನೆ ಮಾಡಿದ ದೇವರಾಜ ಅರಸರ ಬಗ್ಗೆ ಕಾಂಗ್ರೆಸ್ ನ ಸರ್ವೋಚ್ಚ ನಾಯಕಿ ಇಂದಿರಾಗಾಂಧಿ ಮನಸ್ಸಿನಲ್ಲಿ ಅಪನಂಬಿಕೆ ಶುರುವಾಯಿತು.ಅರಸರು ತನಗೆ ನಿಷ್ಟರಾಗಿ ಉಳಿದಿಲ್ಲ ಎಂಬ ಅವರ ಅಪನಂಬಿಕೆ ದಿನಕಳೆದಂತೆ ಜ್ವಾಲಾಮುಖಿಯಾಯಿತು.ಪರಿಣಾಮ?ಅರಸರನ್ನು ಮುಖ್ಯಮಂತ್ರಿ ಪಟ್ಟದಿಂದ ಕೆಳಗಿಳಿಸಲು ನಿರ್ಧರಿಸಿದ ಇಂದಿರಾಗಾಂಧಿ ಪಟ್ಟು ಬಿಡದೆ ಆ ಕೆಲಸವನ್ನು ಮಾಡಿ ಮುಗಿಸಿದರು.

ಆದರೆ ತಮ್ಮ ಅಹಂ ಅನ್ನು ತೃಪ್ತಿಪಡಿಸಿಕೊಂಡ ಅವರಿಗೆ ಕರ್ನಾಟಕದ ಸಾಮಾಜಿಕ ಸಂರಚನೆ ಅರ್ಥವಾಗಲಿಲ್ಲ.ಸತತ ಎಂಟತ್ತು ವರ್ಷಗಳ ಕಾಲ ದುಡಿದು ಅರಸರು ಕಟ್ಟಿದ ಬಲಾಢ್ಯ ಸೈನ್ಯದಲ್ಲಿ ಎಂತಹ ಬಿರುಕು ಮೂಡಬಹುದು ಎಂಬುದು ಅರ್ಥವಾಗಲಿಲ್ಲ.

ಯಾಕೆಂದರೆ ರಾಜ್ಯವನ್ನು ಆಳುತ್ತಾ ಬಂದ ಬಲಿಷ್ಟ ವರ್ಗಗಳ ಸೈನ್ಯಕ್ಕೆ ಪ್ರತಿಯಾಗಿ ಅರಸರು ಶೋಷಿತ ವರ್ಗಗಳ ಸೈನ್ಯ ಕಟ್ಟಿದ್ದರು.

ಆದರೆ ಯಾವಾಗ ಇಂದಿರಾಗಾಂಧಿ ಅವರು ಅರಸರನ್ನು ಪದಚ್ಯುತಗೊಳಿಸಿದರೋ?ಇದಾದ ನಂತರ ಆ ಶೋಷಿತ ವರ್ಗಗಳ ಸೈನ್ಯದಲ್ಲಿ ಬಿರುಕು ಕಾಣಿಸಿಕೊಂಡಿತು.ಮತ್ತು ಅರಸರ ನಂತರ ಮುಖ್ಯಮಂತ್ರಿಯಾದ ಗುಂಡೂರಾಯರಿಗೆ ಈ ಬಿರುಕು ಸರಿಪಡಿಸುವ ಕೌಶಲವಾಗಲೀ,ಅದಕ್ಕೆ ಅಗತ್ಯವಾಗಿದ್ದ ಸೋಷಿಯಲ್ ಎಂಜಿನಿಯರಿಂಗ್ / ಗೊತ್ತೇ ಇರಲಿಲ್ಲ.

ಪರಿಣಾಮ!ಅರಸರ ಪದಚ್ಯುತಿಯ ಸಂಪೂರ್ಣ ಲಾಭವನ್ನು ಪಡೆದ ಬಲಿಷ್ಟ ವರ್ಗಗಳು ಹೊಸ ಸೈನ್ಯವನ್ನು ಕಟ್ಟಿದವು.ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಆ ಸೈನ್ಯ ಅಖಂಡವಾಗಿ ನಿಲ್ಲದಿದ್ದರೂ ಪ್ರತ್ಯೇಕ ನೆಲೆಯಲ್ಲಿ ಅದಕ್ಕೆ ಬೇಕಾದ ಬ್ರಿಗೇಡ್ ಗಳು ತಲೆ ಎತ್ತಿದವು.

ಅಷ್ಟೊತ್ತಿಗಾಗಲೇ ಕಾಂಗ್ರೆಸ್ ನಿಂದ ಹೊರಬಂದ ಹಿಂದುಳಿದ. ವರ್ಗಗಳ ನಾಯಕ ಸಾರೆಕೊಪ್ಪ ಬಂಗಾರಪ್ಪ ಕೂಡಾ ಅಂತ ಬ್ರಿಗೇಡ್ ಒಂದರ ನೇತೃತ್ವ ವಹಿಸಿದ್ದರು.

ಅರ್ಥಾತ್,ಕಾಂಗ್ರೆಸ್ ನಿಂದ ಹೊರಬಂದು ದೇವರಾಜ ಅರಸರು ಕಟ್ಟಿದ ಕ್ರಾಂತಿರಂಗವನ್ನು ಮುನ್ನಡೆಸುತ್ತಿದ್ದರು.

ಇದೇ ಕಾಲಕ್ಕೆ ಅರಸರ ಭೂ ಸುಧಾರಣಾ ಕಾಯ್ದೆಯಿಂದ ಹೊಡೆತ ತಿಂದ ಶಕ್ತಿಗಳು ರಾಜ್ಯದ ಕೆಲ ಭಾಗಗಳಲ್ಲಿ ಕಾಂಗ್ರೆಸ್ ಗೆ ಪರ್ಯಾಯವಾಗಿ ಬಿಜೆಪಿ ಜತೆ ನಿಂತಿದ್ದವು.

ಹೀಗಾಗಿ ಒಂದು ಕಡೆಯಿಂದ ಜನತಾಪಕ್ಷ,ಮತ್ತೊಂದು ಕಡೆಯಿಂದ ಬಿಜೆಪಿ,ಮಗದೊಂದು ಕಡೆಯಿಂದ ಕ್ರಾಂತಿರಂಗ ಎಂಬ ಶಕ್ತಿಗಳು ಸುತ್ತುವ–ರಿದು ಕಾಂಗ್ರೆಸ್ ಸೈನ್ಯವನ್ನು ಪರಾಭವಗೊಳಿಸಿದವು.ಪರಸ್ಪರ ಕೈಗೂಡಿಸಿ ಸರ್ಕಾರ ರಚಿಸಿದವು.

ಮುಂದೆ ಜನತಾಪಕ್ಷ, ಕ್ರಾಂತಿರಂಗ ಒಂದು ನೆಲೆಯಲ್ಲಿ ಬೆಸೆದುಕೊಂಡುವಾದರೆ ಬಿಜೆಪಿ ಪ್ರತ್ಯೇಕ ಶಕ್ತಿಯಾಗಿ ಉಳಿಯಿತು.

ಯಾವಾಗ ಈ ಬೆಳವಣಿಗೆ ನಡೆಯಿತೋ?ಇದಾದ ನಂತರ ಕಾಂಗ್ರೆಸ್ ಯಾವತ್ತೂ ಸತತವಾಗಿ ಎರಡನೇ ಬಾರಿ ಅಧಿಕಾರ ಹಿಡಿಯಲಿಲ್ಲ.

ಒಂದು ವೇಳೆ ಅರಸರನ್ನು ಕೆಳಗಿಳಿಸುವ ಕೆಲಸವಾಗದಿದ್ದಿದ್ದರೆ,ಮತ್ತು ಈ ಬೆಳವಣಿಗೆಯಿಂದ ಶೋಷಿತ ವರ್ಗಗಳ ಸೈನ್ಯ ದಿಕ್ಕೆಡದೆ ಹೋಗಿದ್ದರೆ ಜನತಾರಂಗ ಸರ್ಕಾರ ಮೇಲೆದ್ದು ನಿಲ್ಲುವುದು ಕಷ್ಟವಿತ್ತು.

ಅಂದ ಹಾಗೆ ಈ ಅಂಶವನ್ನೇಕೆ ಗಮನಿಸಬೇಕೆಂದರೆ ಇವತ್ತು ಕರ್ನಾಟಕದ ರಾಜಕಾರಣ ಪುನ: ಇದೇ ಹಳಿಯ ಮೇಲೆ ಬಂದು ನಿಂತಿದೆ.ಅವತ್ತು ಅರಸರಂತೆ,ಇವತ್ತು ಸಿದ್ದರಾಮಯ್ಯ ಕಾಂಗ್ರೆಸ್ ನಲ್ಲಿ ಶೋಷಿತ ವರ್ಗಗಳ ಸೈನ್ಯ ಕಟ್ಟಿದ್ದಾರೆ.

ಈ ಮಧ್ಯೆ ಇಂದಿರಾ–ಅರಸರ ಮಧ್ಯೆ ಸಂಬಂಧ ಹಳಸಿದಂತೆ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಹೈಕಮಾಂಡ್ ಮಧ್ಯೆ ಸಂಬಂಧ ಹಳಸಿಲ್ಲ. ಅಷ್ಟಾದರೂ ಅಧಿಕಾರ ಹಂಚಿಕೆಯ ಮಾತು ಜೀವಂತವಾಗಿರುವುದರಿಂದ ಮುಂದೇನು?ಎಂಬ ವಿಷಯದಲ್ಲಿ ಅನುಮಾನ ಉಳಿದುಕೊಂಡೇ ಇದೆ.

ಆದರೆ ಸಧ್ಯದ ಪರಿಸ್ಥಿತಿ ಹೇಗೆ ನಿರ್ಮಾಣವಾಗಿದೆ ಎಂದರೆ ಸಿದ್ದರಾಮಯ್ಯ ತಮ್ಮ ಕಾರ್ಯಕ್ರಮಗಳ ಮೂಲಕ,ಎಲ್ಲಕ್ಕಿಂತ ಮುಖ್ಯವಾಗಿ ಶೋಷಿತ ವರ್ಗಗಳಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಮೂಲಕ ಪ್ರಬಲ ಶಕ್ತಿಯಾಗಿ ನೆಲೆಯಾಗಿದ್ದಾರೆ.

ಹೀಗಾಗಿ ಇವತ್ತಿನ ಸ್ಥಿತಿಯಲ್ಲಿ ಸಿದ್ಧರಾಮಯ್ಯ ಅವರನ್ನು ಯಾವುದೇ ಮಾರ್ಗದಿಂದ ಕೆಳಗಿಳಿಸುವುದು ಕಷ್ಟ.ಹಾಗೇನಾದರೂ ಮಾಡುವ ದುಸ್ಸಾಹಸ ನಡೆದರೆ 2028 ರ ವಿಧಾನಸಭೆ ಚುನಾವಣೆ 1983 ರ ವಿಧಾನಸಭಾ ಚುನಾವಣೆಯ ಪ್ರತಿರೂಪವಾಗುತ್ತದೆ.

ಅರ್ಥಾತ್,ಅವತ್ತು ಅರಸರಿಲ್ಲದ ಕಾಂಗ್ರೆಸ್ ಸೈನ್ಯಕ್ಕೆ ಯಾವ ನಿಶ್ಯಕ್ತಿ ಆವರಿಸಿತೋ?ಅದೇ ಬಗೆಯ ನಿಶ್ಯಕ್ತಿ 2028 ರ ವಿಧಾನಸಭಾ ಚುನಾವಣೆಯಲ್ಲೂ ಆವರಿಸುತ್ತದೆ.

ಕೌತುಕದ ಸಂಗತಿ ಎಂದರೆ ಅವತ್ತು ಕಾಂಗ್ರೆಸ್ ಪಕ್ಷವನ್ನು ಎದುರಿಸಲು ಬಲಿಷ್ಟ ವರ್ಗಗಳ ಸೈನ್ಯ ಹೇಗೆ ಸಜ್ಜಾಗುತ್ತಿತ್ತೋ?ಇವತ್ತು ಅದೇ ರೀತಿ ಅವು ಸಜ್ಜಾಗುತ್ತಿವೆ.

ಇಂತಹ ದೈತ್ಯ ಶಕ್ತಿಯನ್ನು ಎದುರಿಸಲು ಕಾಂಗ್ರೆಸ್ ಪಕ್ಷಕ್ಕೆ ಸಿದ್ಧರಾಮಯ್ಯ ಎಂಬ ದಂಡನಾಯಕ ಅನಿವಾರ್ಯ.

ಒಂದು ವೇಳೆ 2028 ರ ಮಹಾಸಂಗ್ರಾಮದಲ್ಲಿ ಕಾಂಗ್ರೆಸ್ ಸೈನ್ಯ ದ ಮುಂಚೂಣಿಯಲ್ಲಿ ಸಿದ್ಧರಾಮಯ್ಯ ಇಲ್ಲದಿದ್ದರೆ ನೋ ಡೌಟ್,ಕಾಂಗ್ರೆಸ್ ವಿರೋಧಿ ಸೈನ್ಯ ಕರ್ನಾಟಕವೆಂಬ ಕೋಟೆಯನ್ನು ನಿರಾಯಾಸವಾಗಿ ತನ್ನ ವಶಕ್ಕೆ ತೆಗೆದುಕೊಳ್ಳಲಿದೆ.

–ಆರ್.ಟಿ.ವಿಠ್ಠಲಮೂರ್ತಿ

